ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

# ಸ್ವಾಭಿಮಾನಿ ಸಹಕಾರಿ

Swabhimani Sahakari

Volume - 11
Issue - 8
Pages - 20
₹ - 12
August - 2013

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



67 ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು

15 ಸ್ವಾತಂತ್ರ್ಯ ದಿನಾಚರಣೆ

ಆಗಸ್ಟ್- ಶ್ರಾವಣ ಸಂಭ್ರಮಕ್ಕೆ ಶುಭಾಶಯಗಳು.....



ರಂಜಾನ್ 9



ವರಮಹಾಲಕ್ಷ್ಮೀ 16



ರಕ್ಷಾ ಬಂಧನ 20



ಶ್ರೀಕೃಷ್ಣ ಜನ್ಮಾಷ್ಟಮಿ 28

ಸೌಹಾರ್ದ ಸಹಕಾರಿಗಳ ಸಂಖ್ಯೆ : 2508 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 511



ಸಹಕಾರಿ ಕ್ಷೇತ್ರದ ಅಭಿವೃದ್ಧಿ ಅವಲಂಬಿಸಿರುವುದು ಸಹಕಾರಿ ಸಂಸ್ಥೆಗಳಲ್ಲಿನ ಸದಸ್ಯರು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿವರ್ಗ. ಜಾಗೃತ ಸದಸ್ಯ, ಉತ್ತಮ ಆಡಳಿತ ಮಂಡಳಿ ಹಾಗೂ ಉತ್ತಮ ಕಾರ್ಯಕ್ಷಮತೆಯುಳ್ಳ ಸಿಬ್ಬಂದಿವರ್ಗ ಅತ್ಯಂತ ಅವಶ್ಯಕ. ಸದಸ್ಯರು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯವರ ಒಟ್ಟಾಗಿ ಕರೆದುಕೊಂಡು ಹೋಗುವ ಕೇಂದ್ರ ಬಿಂಧು ಮುಖ್ಯ ಕಾರ್ಯನಿರ್ವಾಹಕ.

ಅಧ್ಯಕ್ಷರ ಮಾತು

# ಮುಖ್ಯ ಕಾರ್ಯನಿರ್ವಾಹಕರ ಕಾರ್ಯಕ್ಷಮತೆ

ದೇಶದ ಸಹಕಾರಿ ಚಳುವಳಿಗೆ 109 ವರ್ಷ. ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ 13 ವರ್ಷ. ಈ ಅವಧಿಯಲ್ಲಿ ಸಹಕಾರಿ ಕ್ಷೇತ್ರದ ಸಾಧನೆ ಗಣನೀಯ. ಉತ್ತಮ ಆರ್ಥಿಕ ವ್ಯವಸ್ಥೆಯಾಗಿ ದೇಶದ ಜನರ ಜೀವನ ಪದ್ಧತಿಯಾಗಿ ಕಾರ್ಯನಿರ್ವಹಿಸುತ್ತಿದೆ. ವಿಶ್ವ ಸಂಸ್ಥೆಯವರು ಹಾಗೂ ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರು ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಗುರುತಿಸಿ ಸಹಕಾರಿ ಕ್ಷೇತ್ರದ ಬಲಸಂವರ್ಧನೆಗೆ ಸಾಕಷ್ಟು ಪ್ರೋತ್ಸಾಹ ನೀಡಲಾಗುತ್ತಿದೆ. ಇದು ಸ್ವಾಗತಾರ್ಹ ಬೆಳವಣಿಗೆ.

ಸಹಕಾರಿ ಕ್ಷೇತ್ರದ ಅಭಿವೃದ್ಧಿ ಅವಲಂಬಿಸಿರುವುದು ಸಹಕಾರಿ ಸಂಸ್ಥೆಗಳಲ್ಲಿನ ಸದಸ್ಯರು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿವರ್ಗ. ಜಾಗೃತ ಸದಸ್ಯ, ಉತ್ತಮ ಆಡಳಿತ ಮಂಡಳಿ ಹಾಗೂ ಉತ್ತಮ ಕಾರ್ಯಕ್ಷಮತೆಯುಳ್ಳ ಸಿಬ್ಬಂದಿವರ್ಗ ಅತ್ಯಂತ ಅವಶ್ಯಕ. ಸದಸ್ಯರು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯವರ ಒಟ್ಟಾಗಿ ಕರೆದುಕೊಂಡು ಹೋಗುವ ಕೇಂದ್ರ ಬಿಂಧು ಮುಖ್ಯ ಕಾರ್ಯನಿರ್ವಾಹಕ. ಈ ವ್ಯಕ್ತಿಯ ದಕ್ಷತೆ, ಪ್ರಾಮಾಣಿಕತೆ, ಜ್ಞಾನ, ಕಾರ್ಯಕೌಶಲ್ಯ, ಸಾರ್ವಜನಿಕ ಸಂಪರ್ಕ ತಾಂತ್ರಿಕಜ್ಞಾನ ಒಟ್ಟಾರೆ ಕಾರ್ಯಕ್ಷಮತೆ ಬೇರೆಯವರಿಗೆ ಮಾದರಿಯಾಗಿರಬೇಕಾಗುತ್ತದೆ. ಪ್ರಶ್ನಾತೀತವಾಗಿರಬೇಕಾಗುತ್ತದೆ.

ಇಂದಿನ ಪೈಪೋಟಿ ಯುಗದಲ್ಲಿ ಸಹಕಾರ ಕ್ಷೇತ್ರವೂ ಇತರ ವ್ಯವಸ್ಥೆಗಳಲ್ಲಿ ಒಂದಾಗಿ ಕಾರ್ಯನಿರ್ವಹಿಸುವುದರ ಬದಲು ಅತ್ಯಂತ ಉತ್ತಮ ಆರ್ಥಿಕ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುವ ಅಗತ್ಯವಿರುವುದರಿಂದ ಸಹಕಾರಿ ಸಂಸ್ಥೆಗಳ ಮುಖ್ಯಕಾರ್ಯನಿರ್ವಾಹಕರಿಗೆ ಹೆಚ್ಚಿನ ಪರಿಣತಿಯ ಅಗತ್ಯವಿರುವುದರಿಂದ ಸಂಯುಕ್ತ ಸಹಕಾರಿಯು ಪ್ರಸಕ್ತ ಸಾಲಿನಲ್ಲಿ 3 ದಿನಗಳ ಅವಧಿಯ ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿಗಳನ್ನು ಪ್ರಾರಂಭಿಸಿದೆ. ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಸ್ಪಂದಿಸಿದ್ದಾರೆ. ಉತ್ತಮ ವಿಷಯ ಹಾಗೂ ಸಂಪನ್ಮೂಲಗಳನ್ನು ಅಳವಡಿಸಿದೆ. ತರಬೇತಿ ಉತ್ತಮವಾಗಿತ್ತೆಂದು ಪ್ರತಿನಿಧಿಗಳ ಅನಿಸಿಕೆಯಾಗಿದೆ. ನಿಮ್ಮ ಅಭಿಪ್ರಾಯವನ್ನೂ ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ಎಸ್.ಆರ್.ಸತೀಶಚಂದ್ರ
ಅಧ್ಯಕ್ಷರು

# ಸಂಪಾದಕೀಯ



## ವಾರ್ಷಿಕ ಸಾಮಾನ್ಯ ಸಭೆ ಹಾಗೂ ಚುನಾವಣೆಗಳು

97ನೇ ಸಂವಿಧಾನ ತಿದ್ದುಪಡಿಯ ಹಿನ್ನೆಲೆಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಯಾಗಿದೆ. ನಿಯಮಗಳ ರಚನೆ ಅಂತಿಮ ಹಂತದಲ್ಲಿದೆ. ರಾಜ್ಯದ ಪ್ರತಿಯೊಂದು ಸೌಹಾರ್ದ ಸಹಕಾರಿಗಳು 25ನೇ ಸೆಪ್ಟೆಂಬರ್ ಒಳಗಾಗಿ ವಾರ್ಷಿಕ ಸಾಮಾನ್ಯ ಸಭೆ ನಡೆಸುವುದು ಕಡ್ಡಾಯ. ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸದಿರುವ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿಯ ಎಲ್ಲ ಸದಸ್ಯರು ಮುಂದಿನ 5 ವರ್ಷಗಳ ವರೆಗೆ ಆಡಳಿತ ಮಂಡಳಿಯ ಸದಸ್ಯರಾಗುವುದಕ್ಕೆ ಅನರ್ಹತೆಗೊಳಗಾಗುತ್ತಾರೆ. ಸಹಕಾರಿಗೆ ವಿಶೇಷ ಅಧಿಕಾರಿಯನ್ನು ನೇಮಿಸಲಾಗುತ್ತದೆ. ಆದ್ದರಿಂದ ಪ್ರತಿಯೊಂದು ಸಹಕಾರಿಯು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಕ್ರಮವಿಡುವುದು ಅವಶ್ಯಕ.

ವಾರ್ಷಿಕ ಸಾಮಾನ್ಯ ಸಭೆ ಒಂದು ಸಹಕಾರಿಯ ಅತ್ಯುನ್ನತ ಅಧಿಕಾರವನ್ನು ಹೊಂದಿರುವ ಸಭೆ. (General Body is the supreme Authoeity) ಸದಸ್ಯರಿಗೆ ಈ ಬಗ್ಗೆ ಪೂರ್ಣ ಮಾಹಿತಿ ಒದಗಿಸುವುದು ಕಡ್ಡಾಯ. ಸಭೆಯ ನೋಟೀಸಿನಲ್ಲಿ ಸಭೆಯ ದಿನಾಂಕ, ಸ್ಥಳ,ಸಮಯ ಹಾಗೂ ಸೌಹಾರ್ದ ಸಹಕಾಯ್ದೆಯನ್ವಯ ಸಭೆಯಲ್ಲಿ ಚರ್ಚಿಸಲಿರುವ ಎಲ್ಲಾ ವಿಷಯಗಳ ಬಗ್ಗೆ ಮಾಹಿತಿ ನೀಡುವುದು ಅವಶ್ಯಕ.

ಸಭೆಯ ನೋಟೀಸನ್ನು ಸಹಕಾರಿಯ ಎಲ್ಲ ಅರ್ಹ ಸದಸ್ಯರಿಗೆ ತಲುಪಿಸುವ ವ್ಯವಸ್ಥೆಯಾಗಬೇಕು. ಅಂಚೆ ಮೂಲಕ ಅಥವಾ ವಿದ್ಯುನ್ಮಾನ ಅಂಚೆ (ಇ–ಮೇಲ್) ಮೂಲಕ ಅಥವಾ ಸೂಕ್ತ ಸ್ವೀಕೃತಿಸಹಿತ ಸ್ಥಳಿಯ ವ್ಯವಸ್ಥೆಮೂಲಕ ಮತ್ತು ಸಾಕಷ್ಟು ಪ್ರಚಾರವಿರುವ ಸ್ಥಳೀಯ ಪತ್ರಿಕೆಗಳ ಮೂಲಕ ಸಭೆಯ ನೋಟೀಸನ್ನು ತಲುಪಿಸಬೇಕು.

ವಾರ್ಷಿಕ ಮಹಾಸಭೆಗೆ ಅಗತ್ಯ ಕೋರಂವಿರಲೇಬೇಕು ಕೋರಂ ಇರದೆ ಸಭೆ ನಡೆಸುವಂತಿಲ್ಲ. ಕೋರಂ ಇಲ್ಲದಿದ್ದರೆ ಸಭೆಯನ್ನು ಮುಂದೂಡಬೇಕು. ಮುಂದೂಡಿದ ಸಭೆಯ ವಿವರಗಳನ್ನು ಎಲ್ಲ ಸದಸ್ಯರಿಗೆ ತಿಳುಹಿಸಬೇಕು. ಮುಂದೂಡಿದ ಸಭೆಗೂ ಸಹ ಕೋರಂ ಅವಶ್ಯಕ

ವಾರ್ಷಿಕ ಸಾಮಾನ್ಯ ಸಭೆ ಸಹಕಾರಿಯ ಸದಸ್ಯರ ವ್ಯವಹಾರಗಳ ನಿರ್ಣಾಯಕ ಸಭೆಯಾಗಿರುತ್ತದೆ. ಎಲ್ಲಾ ಸದಸ್ಯರಿಗೂ ಸಮಾನ ಹಕ್ಕು ಜವಾಬ್ದಾರಿಗಳು ಇರುವುದರಿಂದ ಸಮಾನ ಗೌರವವೂ ಅಗತ್ಯ. ಆದ್ದರಿಂದ ಸಾಮಾನ್ಯ ಸಭೆಯಲ್ಲಿ ವಿಷಯವಾರು ಚರ್ಚೆಗೆ ಮುಕ್ತ ಅವಕಾಶ ಒದಗಿಸುವುದು ಅವಶ್ಯಕ. ಸಭೆ ನಡೆಸಿರುವ ಬಗ್ಗೆ ಪೂರ್ಣ ವಿವರಗಳನ್ನು ಸಹಕಾರಿಗಳ ನಿಬಂಧಕರಿಗೆ ಹಾಗೂ ಸಂಯುಕ್ತ ಸಹಕಾರಿಗೆ ಸೆಪ್ಟೆಂಬರ್ 30 ತಾರೀಖಿನ ಒಳಗಾಗಿ ಕಳುಹಿಸಲು ಕ್ರಮವಿಡತಕ್ಕದ್ದು. **ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಚುನಾವಣಾಧಿಕಾರಿಗಳ ನೇಮಕವಾಗಿದೆ. ಸೆಪ್ಟೆಂಬರ್ 7 ಮತ್ತು 8ರ ದಿನಾಂಕಗಳಂದು ಚುನಾವಣೆ ನಿಗಧಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಜಿಲ್ಲೆಯ ಚುನಾವಣಾಧಿಕಾರಿಗಳನ್ನು ಸಂಪರ್ಕಿಸಿ ಅವರ ಸೂಚನೆಯಂತೆ ಕ್ರಮವಿಡತಕ್ಕದ್ದು.**

### ಒಳ ಪುಟಗಳಲ್ಲಿ...


ಸಂಯುಕ್ತ ಸಹಕಾರಿಯ ಕಾರ್ಯ ಚಟುವಟಿಕೆಗಳು ........ 4

ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ ಹಾಗೂ ಚಿತ್ರದುರ್ಗ, ರಾಯಚೂರು, ಕೊಪ್ಪಳ ..... 5

ಉಪ ವಿಧಿಗಳ ತಿದ್ದುಪಡಿ – ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ಕಾರ್ಯಕ್ರಮಗಳು ........ 7

ಬಿಜಾಪುರ : ಸ್ಪರ್ಧಾತ್ಮಕ ಯುಗದಲ್ಲಿ ತರಬೇತಿ ಅತ್ಯವಶ್ಯಕ – ಶ್ರೀ ಎನ್.ಎಸ್. ಹಣಗಿ, ಉಪನಿಬಂಧಕರು ........ 8

ಬಳ್ಳಾರಿ : ತರಬೇತಿಯಿಂದ ಅಭಿವೃದ್ಧಿ ಸಾಧ್ಯ – ಶ್ರೀ ವೃಷಬೇಂದ್ರಯ್ಯ, ಜಿಲ್ಲಾ ಯೂನಿಯನ್ ಅಧ್ಯಕ್ಷ ........ 9

ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಹಾಗೂ ಕಾರ್ಯಚಟುವಟುಕೆಗಳ ಬಗ್ಗೆ ಮೆಚ್ಚುಗೆ ........ 10

ಸೌಹಾರ್ದ ಸಹಕಾರಿಗಳ ಬೆಳವಣಿಗೆ ಪ್ರಶಂಸನೀಯ; ಕಾರ್ಯಾಚರಣೆ ಅನುಕರಣೀಯ – ಶ್ರೀ ಆರ್.ಎಂ.ಮಂಜುನಾಥಗೌಡ ........ 11

21ನೇ ಶತಮಾನದಲ್ಲಿ ಸಹಕಾರ ಚಳುವಳಿಯ ಪಾತ್ರ ಕುರಿತು ಸಂವಾದ ಕಾರ್ಯಕ್ರಮ ...... 12

ಮುಖ್ಯ ಕಾರ್ಯನಿರ್ವಾಹಕರ ಪಾತ್ರ ಅತ್ಯಂತ ಮಹತ್ವದ್ದು – ಶ್ರೀ ಚನ್ನಪ್ಪಗೌಡ ........ 13

ಮುಖ್ಯಕಾರ್ಯನಿರ್ವಾಹಕರು ಸಹಕಾರಿಯ ಅಧಿಕೃತ ವಕ್ತಾರರು – ಶ್ರೀ ಕೆ.ಎಸ್.ನವೀನ್ .... 14

ಹಾನಗಲ್ಲ: ಆದರ್ಶ ಪತ್ತಿನ ಸೌಹಾರ್ದ ಸಹಕಾರಿಯ ನೂತನ ಕಟ್ಟಡ ಉದ್ಘಾಟನೆ ........ 15

ಸಕಾಲ ಯೋಜನೆ – ವೆಬ್‌ತಾಣ ........ 16

ಸಹಕಾರ ಕ್ಷೇತ್ರದಲ್ಲಿ ಸದಸ್ಯರ ಅರಿವು ಮತ್ತು ವೃತ್ತಿಪರತೆ – ಸಂಪನ್ಮೂಲಗಳ ಮತ್ತು ಮನಸ್ಥಿತಿಯ ಬದಲಾವಣೆಯ ಅಗತ್ಯತೆ ........ 17

ಚಿಟ್‌ಫಂಡ್ – ಚೀಟಿ ವ್ಯವಹಾರದ ಬಗ್ಗೆ ಒಂದಷ್ಟು ಮಾಹಿತಿ ........ 18

ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆ ........ 20

# ಸಂಯುಕ್ತ ಸಹಕಾರಿಯ ಜುಲೈ ಮಾಹೆಯ ತರಬೇತಿ ಕಾರ್ಯಕ್ರಮಗಳು

## ಇ-ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಯವರಿಗೆ ತರಬೇತಿ



ದಿನಾಂಕ : 16.07.2013 ಹಾಗೂ 17.07.2013 ರಂದು ಬೆಂಗಳೂರಿನಲ್ಲಿ ನಡೆದ ಇ-ಸ್ಟ್ಯಾಂಪಿಂಗ್ ತರಬೇತಿ ಕಾರ್ಯಕ್ರಮ.

## ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಹಾಗೂ ರಾಮನಗರ...

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ನೇತೃತ್ವದಲ್ಲಿ ದಿ : 16.07.2013ರಂದು ಬೆಂಗಳೂರು ನಗರ ಹಾಗೂ ದಿ : 17.07.2013 ರಂದು ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ ಜಿಲ್ಲೆಗಳಲ್ಲಿ ಇ–ಸ್ಟ್ಯಾಂಪಿಂಗ್ ಕೇಂದ್ರಗಳನ್ನು ನಡೆಸುತ್ತಿರುವ ಸೌಹಾರ್ದ ಸಹಕಾರಿಗಳ ಎಸಿಸಿ ಕೇಂದ್ರಗಳ ಸಿಬ್ಬಂದಿಗಳಿಗೆ ಇ–ಸ್ಟ್ಯಾಂಪಿಂಗ್ ತರಬೇತಿ ಕಾರ್ಯಕ್ರಮವನ್ನು ಆರ್.ಐ.ಸಿ.ಎಂ., ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

ದಿ : 17.07.2013ರ ತರಬೇತಿ ಕಾರ್ಯಕ್ರಮವನ್ನು ಶ್ರೀ ರಾಮಣ್ಣ ನಾಯಕ್, ಐಎಎಸ್ ಅಧಿಕಾರಿ (ನಿವೃತ್ತ) ಇವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸ್ಟಾಕ್‌ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದ ವಿಭಾಗೀಯ ಮುಖ್ಯಸ್ಥ ಶ್ರೀ ಕಾಳಿದಾಸ್ ಹಾಗೂ ಏರಿಯಾ ಮ್ಯಾನೇಜರ್ ಶ್ರೀ ರಾಘವೇಂದ್ರ ಆಗಮಿಸಿದ್ದರು.

ಸಹಕಾರಿಯ ತರಬೇತಿ ಅಧಿಕಾರಿ ಶ್ರೀ ವಿ.ಜೆ.ಕಾರಕೂನ್ ಸ್ವಾಗತಿಸಿದರೆ, ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ನಾರಾಯಣ ಹೆಗಡೆ ವಂದಿಸಿದರು.

ಇ–ಸ್ಟ್ಯಾಂಪಿಂಗ್‌ಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮೊದಲನೆಯ ದಿನದ ಅವಧಿಯಲ್ಲಿ ಶ್ರೀ ರಾಮಣ್ಣ ನಾಯಕ್, ಐಎಎಸ್ ಅಧಿಕಾರಿ (ನಿವೃತ್ತ), ವಿಜಯ್ ರೆಡ್ಡಿ, SHCIL ಹಾಗೂ ಕೃತಿ ಜನಾರ್ಧನ್, ಸಹಾಯಕ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಇವರುಗಳು ಉಪನ್ಯಾಸವನ್ನು ನೀಡಿದರು. ತರಬೇತಿ ಕಾರ್ಯಕ್ರಮದಲ್ಲಿ ಬೆಂಗಳೂರು ಜಿಲ್ಲೆಯ 46 ಇ–ಸ್ಟ್ಯಾಂಪಿಂಗ್ ಕೇಂದ್ರಗಳಿಂದ 68 ಪ್ರತಿನಿಧಿಗಳು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದರು.

ಎರಡನೆಯ ದಿನದ ಅವಧಿಯಲ್ಲಿ ಶ್ರೀ ಭೋಜಾ ನಾಯಕ್, Assistant Inspector General Registeration of Stamps (AIGR), ಸತೀಶ್, SHCIL ಹಾಗೂ ಕೃತಿ ಜನಾರ್ಧನ್, ಸಹಾಯಕ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಇವರುಗಳು ಉಪನ್ಯಾಸವನ್ನು ನೀಡಿದರು. ತರಬೇತಿ ಕಾರ್ಯಕ್ರಮದಲ್ಲಿ ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಹಾಗೂ ರಾಮನಗರ ಜಿಲ್ಲೆಗಳ 32 ಇ–ಸ್ಟ್ಯಾಂಪಿಂಗ್ ಕೇಂದ್ರಗಳಿಂದ 59 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.





**ಉಡುಪಿ...** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನೇತೃತ್ವದಲ್ಲಿ ದಿ : 25-7-2013ರಂದು ಉಡುಪಿಯಲ್ಲಿ ಸೌಹಾರ್ದ ಸಹಕಾರಿಗಳ ಇ-ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗೆ ಉಡುಪಿ ತಾಲ್ಲೂಕು ಇಂಡಸ್ಟ್ರಿಯಲ್ ಕೋ-ಅಪರೇಟಿವ್ ಸೊಸೈಟಿ ಸಭಾಭವನ, ಕಿನ್ನಿಮೂಲ್ಕಿ ಉಡುಪಿ ಇಲ್ಲಿ ಏರ್ಪಡಿಸಲಾಗಿತ್ತು.

ಉಡುಪಿಯ ಉಪ ನೋಂದಣಾಧಿಕಾರಿ ಶ್ರೀ ಎನ್.ತಿಪ್ಪೆಸ್ವಾಮಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಮುಖ್ಯ ಅಥಿತಿಗಳಾಗಿ ಎಸ್‌ಹೆಚ್‌ಐಸಿಎಲ್ ವಲಯ ವ್ಯವಸ್ಥಾಪ ಶ್ರೀ ಭುಜಂಗೇಶ ಕಾಮತ್ ಆಗಮಿಸಿದ್ದರು. ಬೆಂಗಳೂರಿನ ಕರಾಸೌಸಂಸ ನಿರ್ದೇಶಕ ಶ್ರೀ ಭಾಸ್ಕರ ಕಾಮತ್ ಅಧ್ಯಕ್ಷತೆ ವಹಿಸಿದ್ದರು.

## ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ ಹಾಗೂ ಚಿತ್ರದುರ್ಗ, ರಾಯಚೂರು, ಕೊಪ್ಪಳ...



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ನೇತೃತ್ವದಲ್ಲಿ ದಿ : 26.07.2013ರಂದು ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಇ-ಸ್ಟ್ಯಾಂಪಿಂಗ್ ಕೇಂದ್ರಗಳನ್ನು ನಡೆಸುತ್ತಿರುವ ಸೌಹಾರ್ದ ಸಹಕಾರಿಗಳ ಎಸಿಸಿ ಕೇಂದ್ರಗಳ ಸಿಬ್ಬಂದಿಗಳಿಗಾಗಿ ಇ-ಸ್ಟ್ಯಾಂಪಿಂಗ್ ತರಬೇತಿ ಕಾರ್ಯಕ್ರಮವನ್ನು ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ.,ಯಲ್ಲಿ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮವನ್ನು ಶಿವಮೊಗ್ಗ ಜಿಲ್ಲಾ ಕೇಂದ್ರ ಬ್ಯಾಂಕ್‌ನ ನಿರ್ದೇಶಕ ಶ್ರೀ ಎಂ.ಜಿ.ನಾಗಭೂಷಣ ಉದ್ಘಾಟಿಸಿದರು. ಕ.ರಾ.ಸೌ.ಸಂ.ಸ.ನಿ., ನಿರ್ದೇಶಕ ಶ್ರೀ ಹೆಚ್.ವಿ.ರವಿಕುಮಾರ್ ಅಧ್ಯಕ್ಷತೆ ವಹಿಸಿದ್ದರು.



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ವತಿಯಿಂದ "ದಿನಾಂಕ: 02-08-2013 ರಂದು ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಇ-ಸ್ಟಾಂಪಿಂಗ್ ನಡೆಸುತ್ತಿರುವ ಎಲ್ಲಾ ಎಸಿಸಿ ಕೇಂದ್ರಗಳಿಗೆ ಐ.ಎಂ.ಎ. ಹಾಲ್ ಗಂಗಾವತಿ"ಯಲ್ಲಿ ಒಂದು ದಿನದ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿ ಕಾರ್ಯಾಗಾರಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದಂತಹ ಶ್ರೀಮತಿ ಕೃತಿ ಜನಾರ್ಧನ್, ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಚಾಲನೆ ನೀಡಿದರು.




## ಗುಲಬರ್ಗಾ, ಬೀದರ, ಯಾದಗಿರಿ...

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಗುಲಬರ್ಗಾ ವಿಭಾಗದ ಇ-ಸ್ಟಾಂಪಿಂಗ್ ವ್ಯವಹಾರವನ್ನು ನಡೆಸುತ್ತಿರುವ ಎಲ್ಲಾ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ ಒಂದು ದಿನದ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಅದರಂತೆ "ದಿನಾಂಕ: 03–08–2013 ರಂದು ಗುಲಬರ್ಗಾ, ಬೀದರ ಮತ್ತು ಯಾದಗಿರಿ ಜಿಲ್ಲೆಗಳ ಇ-ಸ್ಟಾಂಪಿಂಗ್ ನಡೆಸುತ್ತಿರುವ ಎಲ್ಲಾ ಎಸಿಸಿ ಕೇಂದ್ರಗಳಿಗೆ ಹೆಚ್.ಕೆ.ಸಿ.ಸಿ. ಹಾಲ್ ಗುಲಬರ್ಗಾ" ಇಲ್ಲಿ ಒಂದು ದಿನದ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿ ಕಾರ್ಯಗಾರಕ್ಕೆ ಉದ್ಘಾಟಕರಾಗಿ ಆಗಮಿಸಿದಂತಹ ಶ್ರೀ ಶಾಂತಿನಾಥ ಪಂಡಿತ್, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

## ಲೇಖನಗಳಿಗಾಗಿ ಮನವಿ

21ನೇ ಶತಮಾನದಲ್ಲಿ ಸಹಕಾರ ಚಳುವಳಿಯ ಪಾತ್ರ ಈ ವಿಷಯದ ಬಗ್ಗೆ ಅನುಭವಿ ಸಹಕಾರಿಗಳು ತಜ್ಞರು ಸಹಕಾರಿ ಇಲಾಖಾಧಿಕಾರಿಗಳು ತಮ್ಮ ಅಭಿಪ್ರಾಯಗಳನ್ನು ಲೇಖನ ರೂಪದಲ್ಲಿ (souharda@souharda.coopಗೆ ಇ–ಮೇಲ್ ಮಾಡಬಹುದು) ಅಥವಾ ಕಛೇರಿಗೆ ಕಳುಹಿಸಲು ಕೋರಿದೆ. ಸದರಿ ಲೇಖನಗಳನ್ನು ಸಂಯುಕ್ತ ಸಹಕಾರಿಯ ಸ್ವಾಭಿಮಾನಿ ಸಹಕಾರಿ ಪತ್ರಿಕೆಯಲ್ಲಿ ಆಯ್ಕೆಮಾಡಿ ಪ್ರಕಟಿಸಲಾಗುವುದು.

## ವಿಭಾಗೀಯ ಕಛೇರಿಗೆ ಶ್ರೀ ಅರುಣ ಶಹಾಪುರ ಭೇಟಿ



ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ವಿಧಾನಪರಿಷತ್ ಸದಸ್ಯರಾದ ಶ್ರೀ ಅರುಣ ಶಹಾಪುರ ಅವರಿಂದ ಗುಲಬರ್ಗಾ ವಿಭಾಗೀಯ ಕಛೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಧಿಕಾರಿಗಳಿಂದ ಪುಷ್ಪಗುಚ್ಛ ನೀಡಿ ಸ್ವಾಗತಿಸಲಾಯಿತು.

## ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸದಸ್ಯರಿಗಾಗಿ "ಸದಸ್ಯರ ತರಬೇತಿ ಕಾರ್ಯಾಗಾರ"

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ನೇತೃತ್ವದಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳ ಗುಣಮಟ್ಟ ನಿರ್ವಹಣೆಯ ಕುರಿತು ಸೌಹಾರ್ದ ಸಹಕಾರಿಯ ಸದಸ್ಯರಿಗಾಗಿ ವಿನೂತವಾದ "ಸದಸ್ಯರ ತರಬೇತಿ" ಕಾರ್ಯಾಗಾರವನ್ನು ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಸದಸ್ಯರುಗಳಿಗಾಗಿ ದಿನಾಂಕ 27.07.2013ರಂದು ಮಧ್ಯಾಹ್ನ 02.30ಗಂಟೆಗೆ ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಶಿವಮೊಗ್ಗ ಇಲ್ಲಿ ಏರ್ಪಡಿಸಲಾಗಿತ್ತು.

ತರಬೇತಿಯ ಅವಧಿಯಲ್ಲಿ "ಸಹಕಾರ ಸಂಘಗಳಲ್ಲಿ ಗುಣಮಟ್ಟ ನಿರ್ವಹಣೆ ಹಾಗೂ ಸದಸ್ಯರ ಪಾತ್ರ" ವಿಷಯದ ಕುರಿತು ಶ್ರೀ ಬಿ ಎ ಮಹದೇವಪ್ಪ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) ಇವರು ತಿಳಿಸಿಕೊಟ್ಟರು. ತರಬೇತಿ ಕಾರ್ಯಾಗಾರಕ್ಕೆ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸದಸ್ಯರುಗಳು ಹಾಗೂ ಕ್ರೆಡಿಟ್ ಸಹಕಾರ ಸಂಘಗಳ ಸದಸ್ಯರುಗಳು ಕೂಡಾ ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

# ಬಾಗಲಕೋಟೆ : ಸಹಕಾರದ ಅಭಿವೃದ್ಧಿಗೆ ಸದಸ್ಯರ ಸಕ್ರಿಯ ಪ್ರಯತ್ನ ಅವಶ್ಯಕ - ಶ್ರೀ ಹೆಚ್.ವೈ.ಗದ್ದನಕೇರಿ



**ಬಾಗಲಕೋಟೆ :** ಪ್ರತಿಯೊಂದು ಸಹಕಾರ ಸಂಘವು ಅಭಿವೃದ್ಧಿ ಹೊಂದಬೇಕಾದರೆ ಆ ಸಂಘದ ಸದಸ್ಯರ ಸಕ್ರಿಯತೆ ಅವಶ್ಯಕತೆ ಮಹತ್ವದ್ದು ಎಂದು ಸಹಕಾರ ಸಂಘಗಳ ಇಲಾಖೆಯ ಉಪನಿಬಂಧಕ ಹೆಚ್.ವೈ.ಗದ್ದನ ಕೇರಿ ಅಭಿಪ್ರಾಯ ಪಟ್ಟರು.

ದಿ : 15-07-2013ರಂದು ನವನಗರದ ಡಿ.ಸಿ.ಸಿ. ಬ್ಯಾಂಕಿನ ಸಭಾ ಭವನದಲ್ಲಿ ಕರ್ನಾಟಕ ಸರಕಾರದ ಸಹಕಾರ ಇಲಾಖೆ, ಕರ್ನಾಟಕ ರಾಜ್ಯ ಕ್ರೇಡಿಟ ಕೋ-ಆಫ್ ಸೊಸೈಟಿಸ್ ಅಸೋಸಿಯೇಶನ ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರ ಸಂಯುಕ್ತ ಆಶ್ರಯದಲ್ಲಿ ಬಾಗಲಕೋಟೆ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ 97ನೇ ಸಂವಿಧಾನ ತಿದ್ದುಪಡಿ ಅನುಗುಣವಾಗಿ ಉಪವಿಧಿ ತಿದ್ದುಪಡಿ, ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣಾ ತರಬೇತಿ ಕಾರ್ಯಗಾರ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಪ್ರತಿಯೊಂದು ಸಹಕಾರ ಸಂಘ ತನಗೆ ಅವಶ್ಯಕವಾದ ರೀತಿ ನೀತಿಗಳನ್ನು ರೂಪಿಸಿ ಕೊಳ್ಳಲು ಎಲ್ಲರಿಗೂ ಸ್ವಾತಂತ್ರ್ಯ ಸಿಕ್ಕಿದೆ. ಆದರೆ, ಅವುಗಳನ್ನು ಹೇಗೆ ರಚಿಸಿಕೊಳ್ಳಬೇಕು ಎಂಬುದರ ಬಗ್ಗೆ ತರಬೇತಿ ಕಾರ್ಯಗಾರಗಳ ಸಹಕಾರಿಯಾಗುತ್ತವೆ. ಇಂತಹ ತರಬೇತಿ ನೀಡಬೇಕಾದ ಇಲಾಖೆ ಹಾಗೂ ಸಂಬಂಧಪಟ್ಟ ಸಂಸ್ಥೆಗಳು ಹಿಂದೇಟು ಹಾಕಿದ್ದರೂ ಸೌಹಾರ್ದ ಸಂಯುಕ್ತ ಸಹಕಾರಿಯು ಮುತವರ್ಜಿ ವಹಿಸಿರುವುದು ಶ್ಲಾಘನಿಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇಂತಹ ಸಂದರ್ಭದಲ್ಲಿ ಕಾರ್ಯಗಾರದ ಲಾಭವನ್ನು ನಾವೆಲ್ಲ ಪಡೆದುಕೊಳ್ಳಬೇಕೆಂದು ಸದಸ್ಯರಿಗೆ ತಿಳಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ ಮಾತನಾಡುತ್ತ, ಸಹಕಾರದ ತತ್ವದ ಆಧಾರದ ಮೇಲೆ ಸಹಕಾರ ಸಂಘಗಳು ರಚನೆಗೊಂಡಿವೆ. ಈ ತತ್ವದ ಆಧಾರ ಮೇಲೆ ಇಂದಿನ ಕಾರ್ಯಗಾರ ಸಹಕಾರ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ನಡೆಯುತ್ತಿವೆ, ಸಂಯುಕ್ತ ಸಹಕಾರಿಯು ಬಾಗಲಕೋಟ ಜಿಲ್ಲೆಯ ಸಹಕಾರಿ ಸಂಘಗಳಿಗೆ ಅವರವರ ಉಪನಿಯಮಗಳ ತಿದ್ದುಪಡಿಗಾಗಿ ಕಾರ್ಯಗಾರವನ್ನು ಏರ್ಪಡಿಸಿದ್ದು ಎಲ್ಲ ಸಹಕಾರಿ ಸಂಘಗಳು ಅದರ ಸದುಪಯೋಗವನ್ನು ಪಡೆದುಕೊಂಡು ತಮ್ಮ ತಮ್ಮ ಉಪನಿಯಮಗಳನ್ನು ತಿದ್ದುಪಡಿ ಮಾಡಿಕೊಳ್ಳಬೇಕು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಾಪೂಜಿ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಿ.ಎನ್.ಪಾಟೀಲರವರು ಉಪಸ್ಥಿತರಿದ್ದ ಎಲ್ಲ ಸಹಕಾರಿ ಸಂಘಗಳ ಅಧ್ಯಕ್ಷ ಹಾಗೂ ಮುಖ್ಯ ವ್ಯವಸ್ಥಾಪಕರಿಗೆ ಸಲಹೆ ಮಾಡಿದರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲಕೋಟದ ಉಪಾಧ್ಯಕ್ಷರಾದ ಶ್ರೀ ಜಿ.ಎನ್.ಪಾಟೀಲ ವಹಿಸಿದರು. ಈ ಸಂದರ್ಭದಲ್ಲಿ ಶ್ರೀ ಬಸವೇಶ್ವರ ಕೋ-ಆಫ್ ಬ್ಯಾಂಕಿನ ಅಧ್ಯಕ್ಷ ಶ್ರೀ ಪ್ರಕಾಶ ತಪಶೆಟ್ಟಿ, ಡಿ.ಸಿ.ಸಿ. ಬ್ಯಾಂಕಿನ ವ್ಯವಸ್ಥಾಪಕದ ಶ್ರೀ ಅಶೋಕ ಬುಳ್ಳಾ, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್.ಜಿ.ಜೋಶಿಯವರು ಉಪಸ್ಥಿತರಿದ್ದರು.

ಈ ತರಬೇತಿ ಕಾರ್ಯಗಾರದಲ್ಲಿ ಜಿಲ್ಲೆಯ 150ಕ್ಕಿಂತ ಹೆಚ್ಚು ಸಹಕಾರಿ ಸಂಘಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಭಾಗವಹಿಸಿ ತರಬೇತಿಯ ಲಾಭವನ್ನು ಪಡೆದುಕೊಂಡರು. ■

# ಬಿಜಾಪುರ : ಸ್ಪರ್ಧಾತ್ಮಕ ಯುಗದಲ್ಲಿ ತರಬೇತಿ ಅತ್ಯವಶ್ಯಕ - ಶ್ರೀ ಎನ್.ಎಸ್.ಹಣಗಿ, ಉಪನಿಬಂಧಕರು



**ಬಿಜಾಪುರ :** ಈಗಿನ ಸ್ಪರ್ಧಾತ್ಮಕ ಯುಗದಲ್ಲಿ ತರಬೇತಿ ಅತ್ಯವಶ್ಯಕತವಾಗಿದ್ದು ಅದನ್ನು ಪಡೆದು ಎಲ್ಲ ಸಹಕಾರಿ ಸಂಸ್ಥೆಗಳ ವ್ಯವಸ್ಥಾಪಕರು ತಮ್ಮ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕೆಂದು ಸಹಕಾರ ಸಂಘಗಳ ಉಪನಿಬಂಧಕ ಶ್ರೀ ಎನ್.ಎಸ್. ಹಣಗಿ ಕರೆ ನೀಡಿದರು.

ದಿ : 16-07-2013ರಂದು ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನ ಆವರಣದ ಶೇಫರ್ಡ್ ಹಾಲ್ನಲ್ಲಿ ಕರ್ನಾಟಕ ಸರಕಾರದ ಸಹಕಾರ ಇಲಾಖೆ, ಕರ್ನಾಟಕ ರಾಜ್ಯ ಕ್ರೆಡಿಟ್ ಕೋ-ಆಫ್ ಸೊಸೈಟಿಸ್ ಅಸೋಸಿಯೇಶನ ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಬಿಜಾಪೂರು ಜಿಲ್ಲೆಯ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ 97ನೇ ಸಂವಿಧಾನ ತಿದ್ದುಪಡಿ ಅನುಗುಣವಾಗಿ ಉಪವಿಧಿ ತಿದ್ದುಪಡಿ, ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣಾ ತರಬೇತಿ ಕಾರ್ಯಾಗಾರವನ್ನು ದೀಪ ಬೆಳಗಿಸುವುದರ ಮುಖಾಂತರ ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರ ಕಾಯ್ದೆಯ 97ನೇ ತಿದ್ದುಪಡಿ ಅನುಗುಣವಾಗಿ ಸಹಕಾರ ಕಾಯ್ದೆಗೆ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿ ಯಾಗಿವೆ. ಆದ್ದರಿಂದ ಎಲ್ಲಾ ಸಹಕಾರಿ ಸಂಘಗಳು ಸೆಪ್ಟೆಂಬರ್ 25ರೊಳಗೆ ಉಪನಿಯಮಗಳಿಗೆ ತಿದ್ದುಪಡಿ ಮಾಡಿಕೊಂಡು, ಚುನಾವಣೆ ನಡೆಸ ಬೇಕೆಂದು ಸೂಚನೆ ನೀಡಿದರು.

ಅತಿಥಿಯಾಗಿ ಆಗಮಿಸಿದ ಬಿಜಾಪೂರು ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಶ್ರೀ ಜಿ.ಬಿ. ನಿಡೋಣಿ, ಸಹಕಾರಿ ಸಂಸ್ಥೆಗಳಿಗೆ ನೇರ ತೆರಿಗೆ ಪದ್ಧತಿ, ಆದಾಯ ತೆರಿಗೆ, ಟಿ.ಡಿ.ಎಸ್ ಅಂತಹ ಅನೇಕ ಸಮಸ್ಯೆಗಳು ಎದುರಾಗಿದ್ದು ಅವುಗಳ ವಿಷಯದಲ್ಲಿ ತರಬೇತಿಗಳ ಅವಶ್ಯಕತೆ ಇದೆ ಎಂದರು. ಶ್ರೀ ನೀಲಕಂಠೇಶ್ವರ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಶ್ರೀ ಹೆಚ್.ಎಸ್ ಹೋಟಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರಿನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ ಮಾತನಾಡಿ, ಸಂಯುಕ್ತ ಸಹಕಾರಿಯು ತರ ಬೇತಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತ ಬರುತ್ತಿದ್ದು, ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು, ಸದಸ್ಯರು ಹಾಗೂ ಸಿಬ್ಬಂದಿಗೆ ತರಬೇತಿ ನೀಡುತ್ತಲಿರುವುದರಿಂದ ಸೌಹಾರ್ದ ಸಹಕಾರಿಗಳು ಗುಣಮಟ್ಟದ ಸೇವೆ ನಿಡುವುದರ ಮುಖಾಂತರ ಸಹಕಾರಿಗಳು ಲಾಭದಾಯಕವಾಗಿ ಉತ್ತಮ ಕಾರ್ಯನಿರ್ವಹಿಸುತ್ತಿವೆ ಎಂದರು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್.ಜಿ.ಜೋಶಿ ಹಾಗೂ ಶ್ರೀ ಸುಭಾಷ ಹೆಗಡೆ ಉಪಸ್ಥಿತರಿದ್ದರು. 70 ಪತ್ತಿನ ಸಹಕಾರ ಸಂಘಗಳಿಂದ 100 ಅಧ್ಯಕ್ಷರು/ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು ಭಾಗವಹಿಸಿ ತರ ಬೇತಿಯ ಪ್ರಯೋಜನ ಪಡೆದುಕೊಂಡರು.

## ರಾಜ್ಯದ ಸೌಹಾರ್ದ ಸಹಕಾರಿಗಳು ಬೇರೆ ಸಂಸ್ಥೆಗಳ /ವ್ಯಕ್ತಿಗಳ ಕರೆಗಳಿಗೆ ಸ್ಪಂದಿಸುವುದು ಅವರ ವಿವೇಚನೆಗೆ ಬಿಟ್ಟಿರುವ ವಿಚಾರ

**ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಬೇರೆ ಸಂಸ್ಥೆಗಳ/ವ್ಯಕ್ತಿಗಳಿಂದ ಬಂದ ಪತ್ರಗಳ ಮೇಲೆ ಅನೇಕ ಸೌಹಾರ್ದ ಸಹಕಾರಿಗಳು ಈ ಕಾರ್ಯಕ್ರಮಗಳಿಗೆ ಹಾಜರಾಗುವ ಬಗ್ಗೆ ಹಾಗೂ ಅವರೂಡನೆ ವ್ಯವಹರಿಸುವ ಬಗ್ಗೆ ವಿಚಾರಣೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಈ ಸ್ಪಷ್ಟೀಕರಣ ನೀಡಲಾಗಿದೆ.**

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಗಮನಕ್ಕೆ ಈ ಮೂಲಕ ತಿಳಿಯಬಯಸುವುದೇನೆಂದರೆ ರಾಜ್ಯದಲ್ಲಿ ಅನೇಕ ಸಂಸ್ಥೆಗಳು ಸಮೂಹ ಸಂಸ್ಥೆಗಳ ಹೆಸರಿನಿಂದ ರಾಜ್ಯದ ಸೌಹಾರ್ದ ಸಹಕಾರಿಗಳನ್ನು, ಸಾರ್ವಜನಿಕರನ್ನು ದಾರಿತಪ್ಪಿಸುವ ಹಾಗೂ ವಂಚನೆ ಮಾಡುವ ಪ್ರಯತ್ನ ಮಾಡುತ್ತಿವೆ. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸಂಬಂದಿಸಿದ ಕಾರ್ಯನಿರ್ವಹಣೆಯನ್ನು ಸೌಹಾರ್ದ ಸಹಕಾರಿ ಕಾಯ್ದೆಯಡಿ ಶಾಸನಬದ್ಧವಾಗಿ ರಚಿತವಾಗಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಮಾತ್ರ." ಎಂಬುದು ತಾವು ತಿಳಿದಿರಬೇಕು. ಸಂಯುಕ್ತ ಸಹಕಾರಿಯು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಅಗತ್ಯವಿರುವ ಶಾಸನಬದ್ಧ ಮಾರ್ಗದರ್ಶನವನ್ನು ಶಿಕ್ಷಣ ತರಬೇತಿ ಹಾಗೂ ಪ್ರಚಾರ ಕಾರ್ಯಗಳ ನಿರ್ವಹಣೆ ಮಾಡುವುದು, ಕಾನೂನು ಸಲಹೆಗಳನ್ನು ನೀಡುವುದು ಸಂಯುಕ್ತ ಸಹಕಾರಿಯ ಕರ್ತವ್ಯವಾಗಿದೆ ಹಾಗೂ ಅಧಿಕೃತವಾಗಿರುತ್ತದೆ. ಇನ್ನಾವುದೇ ಸಂಸ್ಥೆಗಳು / ವ್ಯಕ್ತಿಗಳು ನೀಡುವ ತರಬೇತಿ, ಸಲಹೆ ಹಾಗೂ ಮಾರ್ಗದರ್ಶನಗಳಿಗೆ ಸ್ಪಂಧಿಸುವುದು ಸೌಹಾರ್ದ ಸಹಕಾರಿಗಳ ವಿವೇಚನೆಗೆ ಬಿಟ್ಟಿರುವ ವಿಚಾರ.

# ಬಳ್ಳಾರಿ : ತರಬೇತಿಯಿಂದ ಅಭಿವೃದ್ಧಿ ಸಾಧ್ಯ - ಶ್ರೀ ವೃಷಬೇಂದ್ರಯ್ಯ, ಜಿಲ್ಲಾ ಯೂನಿಯನ್ ಅಧ್ಯಕ್ಷ



ದಿ : 26–7–2013ರಂದು ಹೊಸಪೇಟೆ ಯಲ್ಲಿ 97ನೇ ಸಂವಿಧಾನದ ತಿದ್ದುಪಡಿಗೆ ಅನುಗುಣವಾಗಿ ಬಳ್ಳಾರಿ ಜಿಲ್ಲೆಯ ಕ್ರೆಡಿಟ್ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಉಪವಿಧಿಗಳ ತಿದ್ದುಪಡಿ ಕಾರ್ಯಾಗಾರ, ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ಮತ್ತು ಸೌಹಾರ್ದ ಸಹಕಾರಿಗಳ ಸದಸ್ಯರ ತರಬೇತಿ ಕಾರ್ಯಕ್ರಮ ಹೊಸಪೇಟೆಯ ಹೋಟೆಲ್ ಸಿದ್ಧಾರ್ಥ ರೆಸಿಡೇನ್ಸಿಯಲ್ಲಿ ನಡೆಯಿತು.

ಹೊಸಪೇಟೆಯ ಬಳ್ಳಾರಿ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ವೃಷಬೇಂದ್ರಯ್ಯ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿದರು.

ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ನಿರ್ದೇಶಕರಾದ ಶ್ರೀ ಎಲ್.ಎಸ್. ಆನಂದ ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಿದರು.

ಹೊಸ ಪೇಟೆ ವಿಭಾಗದ ಸಹಾಯಕ ನಿಬಂಧಕರಾದ ಡಾ. ಜಿ.ಉಮೇಶ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ತರಬೇತಿ ಕಾರ್ಯಗಾರದಲ್ಲಿ ಮೊದಲಿಗೆ 'ಸಹಕಾರ ಸಂಘಗಳ ಉಪವಿಧಿ ತಿದ್ದುಪಡಿ' ವಿಷಯ ಕುರಿತು ಹುಬ್ಬಳ್ಳಿ ಸಹಕಾರಿ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಎಸ್.ಜಿ.ಜೋಷಿ ಉಪನ್ಯಾಸ ನೀಡಿದರು.

ಎರಡನೇ ಅವಧಿಯಲ್ಲಿ 'ಸಹಕಾರ ಸಂಸ್ಥೆಗಳ ಗುಣಮಟ್ಟ ನಿರ್ವಹಣೆಯಲ್ಲಿ ಸದಸ್ಯರ ಪಾತ್ರ' ವಿಷಯ ಕುರಿತು ಹೊಸ ಪೇಟೆ ಉಪ ವಿಭಾಗದ ಸಹಾಯಕ ನಿಬಂಧಕರಾದ ಡಾ. ಜಿ.ಉಮೇಶ್ ಉಪನ್ಯಾಸ ನೀಡಿದರು.

ಬಳ್ಳಾರಿ ಜಿಲ್ಲೆಯ 27 ಕ್ರೆಡಿಟ್ ಸಹಕಾರ ಸಂಘಗಳಿಂದ 34 ಜನ ಪ್ರತಿನಿಧಿಗಳು ಮತ್ತು ಹೊಸಪೇಟೆ ನಗರದ 11 ಸೌಹಾರ್ದ ಸಹಕಾರಿ ಗಳಿಂದ 32 ಜನ ಸೌಹಾರ್ದ ಸಹಕಾರಿಗಳ ಸದಸ್ಯರು ಭಾಗವಹಿಸಿ ತರಬೇತಿ ಕಾರ್ಯಗಾರದ ಪ್ರಯೋಜನವನ್ನು ಪಡೆದುಕೊಂಡರು.

ಗುಲಬರ್ಗಾ ವಿಭಾಗೀಯ ಅಧಿಕಾರಿ ಶ್ರೀ ಸಂಜಯಕೋರಟಕರ ಅವರು ಸ್ವಾಗತಿಸಿ ವಂದಿಸಿದರೆ, ಕಿರಿಯ ಅಧಿಕಾರಿ ಶ್ರೀ ರಾಜಶೇಖರ್ ಹೆಚ್. ಕಾರ್ಯಕ್ರಮ ನಿರೂಪಿಸಿದರು.

# ರಾಯಚೂರು : ಉಪವಿಧಿ ತಿದ್ದುಪಡಿ, ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಾಹಣಾ ಕಾರ್ಯಗಾರ

ದಿ : 27–7–2013 ರಂದು ರಾಯಚೂರಿನ ಕ್ರೆಡಿಟ್ ಸಹಕಾರ ಸಂಘಗಳಿಗೆ ಉಪವಿಧಿಗಳ ತಿದ್ದುಪಡಿ ಕಾರ್ಯಾಗಾರ ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ಮತ್ತು ಸೌಹಾರ್ದ ಸಹಕಾರಿಗಳ ಸದಸ್ಯರ ತರಬೇತಿ ಕಾರ್ಯಕ್ರಮ 97ನೇ ಸಂವಿಧಾನದ ತಿದ್ದುಪಡಿಗೆ ಅನುಗುಣವಾಗಿ ರಾಯಚೂರು ಜಿಲ್ಲೆಯ ಎಲ್ಲಾ ಕ್ರೆಡಿಟ್ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಕರುಗಳಿಗೆ "ಉಪವಿಧಿ ತಿದ್ದುಪಡಿ, ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಾಹಣಾ ಕಾರ್ಯಗಾರ" ಹಾಗೂ ರಾಯಚೂರು ನಗರದ ಸೌಹಾರ್ದ ಸಹಕಾರಿಗಳ ಸದಸ್ಯರಿಗೆ "ಸದಸ್ಯರ ತರಬೇತಿ" ಕಾರ್ಯಗಾರವನ್ನು ನಗರದ ಸಂತೋಷಿ ಉತ್ಸವ ಗಾರ್ಡನ್‌ನಲ್ಲಿ ಹಮ್ಮಿಕೋಳ್ಳಲಾಗಿತ್ತು.

ಕಾರ್ಯಗಾರದ ಉದ್ಘಾಟನೆಯನ್ನು ಹುಬ್ಬಳ್ಳಿ ಸಹಕಾರಿ ಸಂಘಗಳ ಸಹಾಯಕ ನಿಬಂಧಕ ಶ್ರೀ ಎಸ್.ಜಿ.ಜೋಷಿ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಿಂಧನೂರು ಪತ್ತಿನ ಸೌಹಾರ್ದ ಸಹಕಾರಿ ನಿ., ಅಧ್ಯಕ್ಷ ಶ್ರೀ ಬಿ.ರಾಜಶೇಖರ್ ಉಪಸ್ಥಿತರಿದ್ದರು. ಕಾರ್ಯಗಾರದಲ್ಲಿ ಮೊದಲಿಗೆ 'ಸಹಕಾರ ಸಂಘಗಳ ಉಪವಿಧಿ ತಿದ್ದುಪಡಿ' ವಿಷಯ ಕುರಿತು ಶ್ರೀ ಎಸ್.ಜಿ.ಜೋಷಿ ಅವರು ಉಪನ್ಯಾಸ ನೀಡಿದರು. ಎರಡನೇ ಅವಧಿಯಲ್ಲಿ "ಸಹಕಾರ ಸಂಸ್ಥೆಗಳ ಗುಣಮಟ್ಟ ನಿರ್ವಹಣೆಯಲ್ಲಿ ಸದಸ್ಯರ ಪಾತ್ರ"



ಎಂಬ ವಿಷಯದ ಬಗ್ಗೆ ಶ್ರೀ ಬಿ. ರಾಜಶೇಖರ್ ಉಪನ್ಯಾಸ ನೀಡಿದರು. ಕಾರ್ಯಗಾರದಲ್ಲಿ ರಾಯಚೂರಿನ 28 ಕ್ರೆಡಿಟ್ ಸಹಕಾರ ಸಂಘಗಳಿಂದ 33 ಜನ ಪ್ರತಿನಿಧಿಗಳು ಮತ್ತು ರಾಯಚೂರು ನಗರದ 16 ಸೌಹಾರ್ದ ಸಹಕಾರಿಗಳಿಂದ 36 ಜನ ಸೌಹಾರ್ದ ಸಹಕಾರಿಗಳ ಸದಸ್ಯರು ಭಾಗವಹಿಸಿ ಕಾರ್ಯಗಾರದ ಪ್ರಯೋಜನ ಪಡೆದುಕೊಂಡರು. ಗುಲಬರ್ಗಾ ವಿಭಾಗೀಯ ಅಧಿಕಾರಿ ಶ್ರೀ ಸಂಜಯ ಕೋರಟಕರ ಅವರು ಇವರು ಸ್ವಾಗತಿಸಿ ವಂದಿಸಿ, ಕಾರ್ಯಕ್ರವನ್ನು ನಿರೂಪಿಸಿದರು.

## ಸಂಯುಕ್ತ ಸಹಕಾರಿಯ ಕಛೇರಿಗೆ ಸಹಕಾರ ಸಚಿವ ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ ಭೇಟಿ

# ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಹಾಗೂ ಕಾರ್ಯಚಟುವಟುಕೆಗಳ ಬಗ್ಗೆ ಮೆಚ್ಚುಗೆ



ಸಂಯುಕ್ತ ಸಹಕಾರಿಯ ನಿರ್ದೇಶಕರೊಡನೆ ಸಹಕಾರ ಸಚಿವ ಶ್ರೀ ಮಹದೇವ್ ಪ್ರಸಾದ್

ಕರ್ನಾಟಕ ಸರ್ಕಾರದ ಸಹಕಾರ ಸಚಿವರಾದ ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್ ಅವರು ದಿ : 08.08.2013 ಸಂಯುಕ್ತ ಸಹಕಾರಿಗೆ ಭೇಟಿಗೆ ನೀಡಿ ಸೌಹಾರ್ದ ಸಹಕಾರಿ ಚಳುವಳಿಯ ಕಾರ್ಯಚಟುವಟಿಕೆಗಳ ಪರಿಶೀಲನೆ ನಡೆಸಿ, ಸೌಹಾರ್ದ ಸಹಕಾರಿ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಗಳಲ್ಲಿ ಇಚ್ಛಾಶಕ್ತಿ ಅಗತ್ಯ ಎಂದು ತಿಳಿಸಿದರು. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರದ ಸಂಪೂರ್ಣ ಬೆಂಬಲವಿದೆ ಎಂದು ತಿಳಿಸಿದರು.

ರಾಜ್ಯದ ಸೌಹಾರ್ದ ಸಹಕಾರ ಚಳುವಳಿ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದೆ. ಸಹಕಾರ ಕಾಯ್ದೆಗಳ ಗೊಂದಲಗಳ ನಿವಾರಣೆಗೆ ಶೀಘ್ರದಲ್ಲಿಯೇ ಅಗತ್ಯ ತಿದ್ದುಪಡಿಗಳನ್ನು ತರಲಾಗುವುದು. 97ನೇ ಸಂವಿಧಾನದ ತಿದ್ದುಪಡಿಯ ಆಶಯಗಳಿಗೆ ಈ ತಿದ್ದುಪಡಿಗಳು ಪೂರಕವಾಗಿರುತ್ತವೆ ಎಂದು ತಿಳಿಸಿದರು.

ಸಾಂಪ್ರದಾಯಿಕ ವ್ಯವಹಾರಗಳ ಜೊತೆಗೆ ಆಧುನಿಕತೆಯನ್ನು ಹಾಗೂ ಹೊಸ ಹೊಸ ವ್ಯವಹಾರಗಳನ್ನು ತಾಂತ್ರಿಕತೆಯನ್ನು ಸಹಕಾರಿ ಸಂಸ್ಥೆಗಳು ಮೈಗೂಡಿಸಿಕೊಳ್ಳಬೇಕಿದೆ ಎಂದರು. ಇದೇ ಸಂದರ್ಭದಲ್ಲಿ ಶ್ರೀಯುತರನ್ನು ಸಂಯುಕ್ತ ಸಹಕಾರಿ ಪರವಾಗಿ ಸನ್ಮಾನಿಸಲಾಯಿತು.



ಸಹಕಾರ ಸಚಿವ ಮಹದೇವ ಪ್ರಸಾದ್‌ರಿಗೆ ಸಂಯುಕ್ತ ಸಹಕಾರಿಗಳಿಂದ ಅಭಿನಂದನೆಗಳು.



ಸೌಹಾರ್ದ ಸಹಕಾರಿ ಕಾಯ್ದೆಯ ಲೋಪದೋಷಗಳ ತಿದ್ದುಪಡಿಗಾಗಿ ಸಚಿವರಲ್ಲಿ ಮನವಿ ಹಾಗೂ ಸಮಾಲೋಚನೆ.

# ಸೌಹಾರ್ದ ಸಹಕಾರಿಗಳ ಬೆಳವಣಿಗೆ ಪ್ರಶಂಸನೀಯ; ಕಾರ್ಯಾಚರಣೆ ಅನುಕರಣೀಯ – ಶ್ರೀ ಆರ್.ಎಂ. ಮಂಜುನಾಥಗೌಡ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಕ್ರೆಡಿಟ್ ಸೊಸೈಟೀಸ್ ಅಸೋಸಿಯೇಷನ್, ಬೆಂಗಳೂರು ಹಾಗೂ ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಶಿವಮೊಗ್ಗ ಇವರುಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ 27.07.2013 ರಂದು ಬೆಳಿಗ್ಗೆ 10.00ಗಂಟೆಗೆ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಕ್ರೆಡಿಟ್ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳಿಗಾಗಿ "ಕ್ರೆಡಿಟ್ ಸಹಕಾರ ಸಂಘಗಳ ಉಪವಿಧಿ ತಿದ್ದುಪಡಿಗಳು ಹಾಗೂ ಅಧಿಪ್ರೇರಣೆ ಕಾರ್ಯಾಗಾರ"ವನ್ನು ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್, ಬೆಂಗಳೂರು ಹಾಗೂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಶಿವಮೊಗ್ಗ ಇದರ ಅಧ್ಯಕ್ಷರಾದ ಶ್ರೀ ಆರ್.ಎಂ.ಮಂಜುನಾಥಗೌಡರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಕ.ರಾ.ಸೌ.ಸಂ.ಸ.ನಿ., ಬೆಂಗಳೂರಿನ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಶಶಿಧರ್, ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶ್ರೀ ಎಂ.ಜಿ.ನಾಗಭೂಷಣ, ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಶಿವಮೊಗ್ಗ, ಶ್ರಿ ಬಿ.ಡಿ.ಭೂಕಾಂತ, ಅಧ್ಯಕ್ಷರು, ಜಿಲ್ಲಾ ಸಹಕಾರ ಯೂನಿಯನ್, ಶಿವಮೊಗ್ಗ ಹಾಗೂ ಶ್ರೀ ಎನ್.ರವಿ, ಪ್ರಾಂಶುಪಾಲರು, ಕೆಐಸಿಎಂ, ಶಿವಮೊಗ್ಗ ಇವರುಗಳು



ಆಗಮಿಸಿದ್ದರು. ಕಾರ್ಯಕ್ರಮವನ್ನು ಶ್ರೀ ವಿ.ಜೆ.ಕಾರಕೂನ, ತರಬೇತಿ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಸ್ವಾಗತಿಸಿದರು. ವಂದನಾರ್ಪಣೆಯನ್ನು ಶ್ರೀ ಹೆಚ್.ವಿ.ರವಿಕುಮಾರ್, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಇವರು ನಡೆಸಿಕೊಟ್ಟರು.

ತರಬೇತಿಯ ಅವಧಿಯಲ್ಲಿ "ಕ್ರೆಡಿಟ್ ಸಹಕಾರ ಸಂಘಗಳ ಉಪವಿಧಿ ತಿದ್ದುಪಡಿ" ವಿಷಯದ ಬಗ್ಗೆ ಶ್ರೀ ಸಿ.ಎನ್.ಪರಶಿವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) ಇವರು ಉಪನ್ಯಾಸ ನೀಡಿದರು. ತರಬೇತಿ ಕಾರ್ಯಾಗಾರಕ್ಕೆ 52 ಸಹಕಾರಿ ಸಂಘಗಳಿಂದ 79 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

## ಸೌಹಾರ್ದ ಸಹಕಾರಿಗಳು "ಸಕಾಲ" ಯೋಜನೆಯಡಿ ಸೇವಾ ಪೂರೈಕೆದಾರರಾಗಲು ಅವಕಾಶ

ಕರ್ನಾಟಕ ಸರಕಾರದ ಮಹತ್ವಾಂಕಾಕ್ಷಿ ಯೋಜನೆಯಾದ ಸಕಾಲ ಯೋಜನೆಯ ಸೇವಾ ಪೂರೈಕೆದಾರರ ನೇಮಕಕ್ಕಾಗಿ ದಿನಾಂಕ 26–07–2013ರ ಕನ್ನಡಪ್ರಭ ದಿನಪತ್ರಿಕೆಯ ಪುಟ ಸಂಖ್ಯೆ 3 ಬೆಂಗಳೂರು ನಗರ ಆವೃತ್ತಿಯಲ್ಲಿ ಅರ್ಜಿಯನ್ನು ಆಹ್ವಾನಿಸಿದ್ದು ಈ ಕುರಿತಾಗಿ ಸಂಯುಕ್ತ ಸಹಕಾರಿಯು ಸಕಾಲ ಮಂಡಳಿ (ಆಡಳಿತ ಸುಧಾರಣೆ) ಇಲಾಖೆಯನ್ನು ಸಂಪರ್ಕಿಸಿದ್ದು ಸದರಿಯವರು ಈಗಾಗಲೆ ರಾಜ್ಯದ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೇವಾ ಪೂರೈಕೆದಾರರನ್ನು ನೇಮಿಸಿಕೊಳ್ಳಲು ಅಧಿಕಾರ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಸಂಯುಕ್ತ ಸಹಕಾರಿಯು ಈಗಾಗಲೆ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳಿಗೆ ದಿನಾಂಕ 30–7–2013ರಂದು ಮನವಿ ಸಲ್ಲಿಸಿದೆ. "ಇ" ಸ್ಟಾಂಪಿಂಗ್ ಕೇಂದ್ರಗಳನ್ನು ನಡೆಸುವ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಇ–ಮೇಲ್ ಮೂಲಕ ಮಾಹಿತಿಯನ್ನು ನೀಡಲಾಗಿದೆ.

ಸೌಹಾರ್ದ ಸಹಕಾರಿಗಳು ಸಾರ್ವಜನಿಕರಿಗೆ ಸೇವೆ ಸಲ್ಲಿಸಲು, ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವಕ್ಕೆ ಸರಕಾರದ ಹಾಗೂ ಸಾರ್ವಜನಿಕರ ಮನ್ನಣೆ ದೊರಕಿಸಿಕೊಳ್ಳುವ ಮತ್ತೊಂದು ಅವಕಾಶ ಹಾಗೂ ಸಹಕಾರಿಗಳ ಬಡ್ಡಿಯೇತರ ಆದಾಯ ಹೆಚ್ಚಿಸಿಕೊಳ್ಳುವ ಅವಕಾಶ ಇದಾಗಿದೆ.

ಆಸಕ್ತ ಸೌಹಾರ್ದ ಸಹಕಾರಿಗಳು ತಮ್ಮ ವ್ಯಾಪ್ತಿಯ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ಸಕಾಲ ಯೋಜನೆಯ ಸೇವಾ ಪೂರೈಕೆದಾರರಾಗ ಬಹುದಾಗಿದೆ.

# 21ನೇ ಶತಮಾನದಲ್ಲಿ ಸಹಕಾರ ಚಳುವಳಿಯ ಪಾತ್ರ ಕುರಿತು ಸಂವಾದ ಕಾರ್ಯಕ್ರಮ



ರಾಜ್ಯದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರಿಗಾಗಿ ವಿಶೇಷ ತರಬೇತಿ ಕಾರ್ಯ ಕ್ಷಮತೆ ಅಭಿವೃದ್ಧಿ ಶಿಬಿರ ಏರ್ಪಡಿಸಲಾಗಿತ್ತು. ತರಬೇತಿ ಅವಧಿಯಲ್ಲಿ 21ನೇ ಶತಮಾನದಲ್ಲಿ ಸಹಕಾರ ಚಳುವಳಿಯ ಪಾತ್ರ ಕುರಿತು ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ, ಸಹಕಾರ ಸಂಘಗಳ ನಿವೃತ್ತ ಅಪರನಿಬಂಧಕ ಶ್ರೀ ಸಿ.ಎನ್.ಪರಶಿವಮೂರ್ತಿ ಸಂಯುಕ್ತ ಸಹಕಾರಿ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ.ಜಿ.ಪಾಟೀಲರವರು ಸಂವಾದ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಹಕಾರ ವಾರ ಪತ್ರಿಕೆಯ ಗೌರವ ಸಂಪಾದಕ ಶ್ರೀ ಪಿ.ರುದ್ರಪ್ಪ ಹಾಗೂ ಸಂಯುಕ್ತ ಸಹಕಾರಿಯ ಕಾನೂನು ಅಧಿಕಾರಿ ಶ್ರೀ ಶ್ರೀಕಾಂತ ರವರು ಸಂವಾದಕಾರರಾಗಿ ಕಾರ್ಯಕ್ರಮ ನಡೆಸಿದರು. ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವ ಅನೇಕ ವಿಷಯಗಳ ಬಗ್ಗೆ ಸಂವಾದ ಕಾರ್ಯಕ್ರಮ ನಡೆಯಿತು.

ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಸೇರಿದಂತೆ 72 ಜನರು ಈ ಕಾರ್ಯಕ್ರಮದ ಪ್ರಯೋಜನ ಪಡೆದರು.

# 2ನೇ ಸಂವಾದ ಕಾರ್ಯಕ್ರಮ



ರಾಜ್ಯದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರಿಗಾಗಿ 3 ದಿನಗಳ ವಿಶೇಷ ತರಬೇತಿ ಕಾರ್ಯ ಕ್ಷಮತೆ ಅಭಿವೃದ್ಧಿ ಶಿಬಿರ 3 ನೇ ದಿನದಂದು 21ನೇ ಶತಮಾನದಲ್ಲಿ ಸಹಕಾರ ಚಳುವಳಿ ಕುರಿತಾದ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಹಕಾರ ಚಳುವಳಿಯ ಸಾಧನೆ, ಸವಾಲುಗಳು, ಅವಕಾಶಗಳು, ರಾಷ್ಟ್ರ ಹಾಗೂ ವಿಶ್ವಮಟ್ಟದಲ್ಲಿ ಸಹಕಾರ ಚಳುವಳಿಯ ಪ್ರಚಲಿತ ವಿಷಯಗಳು, ಸಹಕಾರ ಚಳುವಳಿಯಲ್ಲಿ ಯುವಕರ ಹಾಗೂ ಮಹಿಳೆಯರ ಪಾಲುಗಾರಿಕೆ, 97ನೇ ಸಂವಿಧಾನ ತಿದ್ದುಪಡಿ ನಂತರದ ವಿದ್ಯಮಾನಗಳು ಸೌಹಾರ್ದ ಸಹಕಾರ ಕಾಯ್ದೆ ತಿದ್ದುಪಡಿ ನಂತರದ ವಿದ್ಯಮಾನಗಳು, ಮಾಧ್ಯಮದವರೊಡನೆ ಸಹಕಾರಿಗಳ ಸಂಬಂಧ, ಸದಸ್ಯರ ಪಾಲುಗಾರಿಕೆ ಪ್ರಮಾಣವನ್ನು ಹೆಚ್ಚಿಸುವುದರಲ್ಲಿ ನಿರ್ದೇಶಕರ ಹಾಗೂ ಸಿಬ್ಬಂದಿಯವರ ಪಾತ್ರ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳು, ಸರ್ಕಾರದ ಪಾತ್ರ ಹಾಗೂ 21ನೇ ಶತಮಾನದಲ್ಲಿ ಆರ್ಥಿಕ ವ್ಯವಸ್ಥೆಗಳಾಗಿ ಸಹಕಾರ ಸಂಘಟನೆಗಳ ಕಾರ್ಯನಿರ್ವಹಣೆ ಇತ್ಯಾದಿ ವಿಷಯಗಳ ಬಗ್ಗೆ ಪರಿಣಾಮಕಾರಿಯಾದ ಸಂವಾದ ಕಾರ್ಯಕ್ರಮ ನಡೆಯಿತು. ಸಂವಾದ ಕಾರ್ಯಕ್ರಮ ಬಹಳ ಪರಿಣಾಮಕಾರಿಯಾಗಿತ್ತೆಂದು ಭಾಗವಹಿಸಿದ ಪ್ರತಿನಿಧಿಗಳ ಅಭಿಪ್ರಾಯವಾಗಿತ್ತು.

ಅಧ್ಯಕ್ಷತೆಯನ್ನು ಶ್ರೀ ಎಸ್. ಆರ್. ಸತೀಶ್‌ಚಂದ್ರ ಅಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಯಶವಂತ ಡೋಂಗ್ರೆ ಪ್ರಾಧ್ಯಾಪಕರು ಮೈಸೂರು ವಿಶ್ವವಿದ್ಯಾಲಯ, ಶ್ರೀ ಸಿ.ಎನ್.ಪರಶಿವಮೂರ್ತಿ ಸಹಕಾರ ಸಂಘಗಳ ಅಪರ ನಿಬಂಧಕರು ನಿವೃತ್ತ ಮೈಸೂರು, ಶ್ರೀ ವೈ.ವಿ.ಗುಂಡೂರಾವ್ ಅಸಿಸ್ಟೆಂಟ್ ಜನರಲ್ ಮೆನೇಜರ್ ನಿವೃತ್ತ ನಬಾರ್ಡ್ ಇವರುಗಳು ಭಾಗವಹಿಸಿದ್ದರು. ಸಂವಾದಕಾರರಾಗಿ ಶ್ರೀ ಪಿ.ರುದ್ರಪ್ಪ ಸಹಕಾರ ವಾರಪತ್ರಿಕೆ ಗೌರವ ಸಲಹೆಗಾರರು ಶ್ರೀ ಶ್ರೀಕಾಂತ ಎ.ಜಿ.ಎಮ್. ಕಾನೂನು ವಿಭಾಗ ಸಂಯುಕ್ತ ಸಹಕಾರಿ ಇವರು ಕಾರ್ಯಕ್ರಮ ನಿರ್ವಹಣೆ ಮಾಡಿದರು.

ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಕಾರ್ಯ ಕ್ಷಮತೆ ಅಭಿವೃದ್ಧಿ ಶಿಬಿರದ ತರಬೇತಿ"

# ಮುಖ್ಯ ಕಾರ್ಯನಿರ್ವಾಹಕರ ಪಾತ್ರ ಅತ್ಯಂತ ಮಹತ್ವದ್ದು - ಶ್ರೀ ಚನ್ನಪ್ಪಗೌಡ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಏರ್ಪಡಿಸಿದ್ದ ವಿಶೇಷ ತರಬೇತಿ ಕಾರ್ಯಕ್ರಮ "ಕಾರ್ಯ ಕ್ಷಮತೆ ಅಭಿವೃದ್ಧಿ ತರಬೇತಿ" ಶಿಬಿರವನ್ನು ರಾಜ್ಯದ ಸಹಕಾರಿಗಳ ನಿಬಂಧಕರಾದ ಶ್ರೀ ಚನ್ನಪ್ಪಗೌಡರವರು ಉದ್ಘಾಟಿಸಿ ಮಾತನಾಡುತ್ತ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಸಹಕಾರಿಗಳ ಆಶೋತ್ತರಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವಂತಹ ತರಬೇತಿ ಅತ್ಯಂತ ಅವಶ್ಯಕ ಎಂದು ತಿಳಿಸಿದರು. ಸಹಕಾರ ಕ್ಷೇತ್ರದ ಮೂಲಕ ಜನಸಾಮಾನ್ಯರಿಗೆ ಹೆಚ್ಚಿನ ಸೌಲಭ್ಯವನ್ನು ನೀಡಬಹುದಾಗಿದೆ. ಸದಸ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅವಕಾಶಗಳಿವೆ ಇವುಗಳನ್ನೆಲ್ಲ ಪರಿಣಾಮಕಾರಿಯಾಗಿ ನಿರ್ವಹಿಸಬೇಕಾದರೆ ಅವುಗಳ ಬಗ್ಗೆ ತಿಳಿವಳಿಕೆ ಅಗತ್ಯ. ಈ ನಿಟ್ಟಿನಲ್ಲಿ ತರಬೇತಿ ಅವಶ್ಯಕ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಸಂಯುಕ್ತ ಸಹಕಾರಿ ಹಲವು ವಿಧವಾದ ತರಬೇತಿಗಳನ್ನು ರಾಜ್ಯದಾದ್ಯಂತ ನಡೆಸುತ್ತಿದೆ. 97ನೇ ಸಂವಿಧಾನ ತಿದ್ದುಪಡಿ ಹಿನ್ನೆಲೆಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿ ಜಾರಿಯಾದಾಗ ರಾಜ್ಯದಾದ್ಯಂತ ಏಪ್ರೀಲ್ ಮಾಹೆಯಲ್ಲಿ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಕೇವಲ 10 ದಿನಗಳಲ್ಲಿ ಒಟ್ಟಾರೆ 33 ತರಬೇತಿ ಕೇಂದ್ರಗಳಲ್ಲಿ ಸೌಹಾರ್ದ ಸಹಕಾರಿಗಳ ಉಪವಿಧಿಗಳ ತಿದ್ದುಪಡಿ ಕಾರ್ಯಾಗಾರಗಳನ್ನು ನಡೆಸಿದ ಸಂದರ್ಭದಲ್ಲಿ ಸಹಕಾರಿಗಳ ನಿಬಂಧಕರಾದ ಶ್ರೀ ಚನ್ನಪ್ಪಗೌಡರವರೆ ಈ ಕಾರ್ಯಾಗಾರಗಳನ್ನು ಉದ್ಘಾಟಿಸಿ ಶುಭ ಹಾರೈಸಿದ್ದರು. ಈ ವಿಶೇಷ ತರಬೇತಿ ಕಾರ್ಯಾಗಾರವನ್ನೂ ಸಹ ನಿಬಂಧಕರೆ ಉದ್ಘಾಟಿಸಿದ್ದಾರೆ. ನಮ್ಮೆಲ್ಲ ಕಾರ್ಯಕ್ರಮಗಳಲ್ಲಿ ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಹಕಾರ ಇಲಾಖೆಯ ಸಂಪೂರ್ಣ ಸಹಕರಿಸುತ್ತಿದೆ ಹೀಗಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೇಳವಣಿಗೆಯ ವೇಗ ಹೆಚ್ಚಿದೆ ಎಂದು ತಿಳಿಸಿದರು ಮತ್ತು ಇತ್ತೀಚಿನ ತಿದ್ದುಪಡಿಗಳಲ್ಲಿ ಕೆಲವು ದೋಷಗಳಾಗಿವೆ ಅವುಗಳನ್ನು ಸರಿಪಡಿಸಿಕೊಡಲು ಎಲ್ಲ ಸೌಹಾರ್ದ ಸಹಕಾರಿಗಳ ಪರವಾಗಿ ವಿನಂತಿಸಿದರು.

ಮುಖ್ಯ ಅತಿಥಿಗಳಾಗಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕ ಡಾ.ಎನ್.ಗಣೇಶ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಶ್ರೀ ಎಸ್.ಜಿ.ಜೋಶಿ, ಶ್ರೀ ಬಿ.ವಿ.ರವೀಂದ್ರನಾಥ, ಶ್ರೀ ಮಧುಕರ ಹೆಗಡೆ, ಡಾ. ನಂದೀಶ ಹಿರೇಮಠ, ಶ್ರೀ ಬಿ.ಎ.ಮಹದೇವಪ್ಪರವರು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

### ಕಾರ್ಯಕ್ಷಮತೆ 2ನೇ ತಂಡದ ತರಬೇತಿ :

# ಮುಖ್ಯಕಾರ್ಯನಿರ್ವಾಹಕರು ಸಹಕಾರಿಯ ಅಧಿಕೃತ ವಕ್ತಾರರು – ಶ್ರೀ ಕೆ.ಎಸ್.ನವೀನ್

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ 3 ದಿನಗಳ ವಿಶೇಷ ತರಬೇತಿ "ಕಾರ್ಯಕ್ಷಮತೆ ಅಭಿವೃದ್ಧಿ ಶಿಬಿರ"ವನ್ನು ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀ ಕೆ.ಎಸ್.ನವೀನ್ ಉದ್ಘಾಟಿಸಿ, ಮಾತನಾಡುತ್ತಾ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಲ್ಲಿ ಸಮಯಕ್ಕೆ ಹೆಚ್ಚಿನ ಮಹತ್ವ ಕೊಡುತ್ತಿರುವುದು ಅತ್ಯಂತ ಶಿಸ್ತುಬದ್ಧವಾಗಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯ. ಅದೇ ರೀತಿ ಪ್ರತಿನಿಧಿಗಳೂ ಸಹ ಸಮಯ ಪಾಲನೆ ಮಾಡುತ್ತಿರುವುದು ಸ್ವಾಗತಾರ್ಹವೆಂದರು. ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಮುಖ್ಯಕಾರ್ಯನಿರ್ವಾಹಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಅಧ್ಯಕ್ಷರು, ಆಡಳಿತ ಮಂಡಳಿ, ಸದ್ಯರು, ಸಿಬ್ಬಂದಿಯವರು, ಸಾರ್ವಜನಿಕರು, ಸರಕಾರ ಈ ಎಲ್ಲ ಜನರಿಗೆ ಮಾಹಿತಿ ನೀಡುವ, ಅವರೊಂದಿಗೆ ವ್ಯವಹರಿಸುವ ಅಧಿಕಾರಿಯಾಗಿರುತ್ತಾರೆ. ಆದ್ದರಿಂದ ಅವರ ಕಾರ್ಯಕ್ಷಮತೆ ಉನ್ನತ ಮಟ್ಟದ್ದಾಗಿರಬೇಕು. ಅದಕ್ಕಾಗಿ ಇಂತಹ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಜ್ಞಾನ ಸಂಪಾದನೆ ಮಾಡಿಕೊಳ್ಳುವುದು ಅವಶ್ಯಕ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶ್‌ಚಂದ್ರ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರನ್ನು ಶ್ರೀಕೃಷ್ಣನ ಪಾತ್ರಕ್ಕೆ ಹೋಲಿಸುತ್ತ ಮುಖ್ಯಕಾರ್ಯನಿರ್ವಾಹಕರು ಶ್ರೀಕೃಷ್ಣನಂತೆ ಸಮಾಜದ ಒಳಿತಿಗಾಗಿ ಕಾರ್ಯನಿರ್ವಹಿಸಲು ಕರೆ ನೀಡಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲರು ಪ್ರಾಸ್ತಾವಿಕವಾಗಿ ಮಾತನಾಡಿ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಅನೇಕ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲಿದೆ. ಪರಿಣಾಮವಾಗಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ವೇಗ ಹೆಚ್ಚಿದೆ.



ಸೌಹಾರ್ದ ಸಹಕಾರಿಗಳ ಗುಣಮಟ್ಟದಲ್ಲಿ ಸುಧಾರಣೆ ಕಾಣುತ್ತಿದೆ. ಸಿಬ್ಬಂದಿಯ ಕಾರ್ಯಕ್ಷಮತೆ ಹೆಚ್ಚುತ್ತಿದೆ ಎಂದರು. ಶ್ರೀ ಶಿವಕುಮಾರ್ ಬಿರಾದಾರ್ ವಂದಿಸಿದರು. ಕಾರ್ಯಕ್ರಮದಲ್ಲಿ 46 ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸಾಲಪತ್ರ ದಾಖಲಾತಿ, ಸಾಲ ವಸೂಲಾತಿ ವಿಷಯದ ಬಗ್ಗೆ ಶ್ರೀ ಎಸ್.ಜಿ.ಜೋಶಿಯವರು, ವಿವಿಧ ತೆರಿಗೆಗಳ ಬಗ್ಗೆ ಶ್ರೀ ಬಿ.ವಿ.ರವೀಂದ್ರನಾಥ ಹಾಗೂ ಶ್ರೀ ಮಧುಕರ ಹೆಗಡೆಯವರು, ಆಡಳಿತ ನಿರ್ವಹಣೆ ವಿಷಯಗಳ ಬಗ್ಗೆ ಶ್ರೀ ಭಾಸ್ಕರ್ ಹೆಗಡೆಯವರು, ಕಛೇರಿ ಆಡಳಿತ ನಿರ್ವಹಣೆ, ಸಮಯ ನಿರ್ವಹಣೆ ಹಾಗೂ ಕಮ್ಯುನಿಕೇಶನ್ ವಿಷಯದ ಬಗ್ಗೆ ಶ್ರೀ ಬಿ.ಎ.ಮಹದೇವಪ್ಪನವರು ಉಪನ್ಯಾಸ ನೀಡಿದರು.

ಸಂವಾದ ಕಾರ್ಯಕ್ರಮ – "21ನೇ ಶತಮಾನದಲ್ಲಿ ಸಹಕಾರ ಚಳುವಳಿ" ವಿಷಯದ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಹಕಾರಿ ತಜ್ಞರುಗಳಾದ ಶ್ರೀ ಯಶವಂತ ಡೊಂಗ್ರೆ, ಶ್ರೀ ಸಿ.ಎನ್.ಪರಶಿವಮೂರ್ತಿ, ಶ್ರೀ ವೈ.ವಿ.ಗುಂಡೂರಾವ್, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ಉಪಸ್ಥಿತರಿದ್ದರು. ಶ್ರೀ ಪಿ.ರುದ್ರಪ್ಪನವರು ಸಂವಾದ ಕಾರ್ಯಕ್ರಮವನ್ನು ನಡೆಸಿಕೊಟ್ಟರು.



ನಮ್ಮ ಸಹಕಾರಿಗಳು ಗ್ರಾಹಕ ಮತ್ತು ಸದಸ್ಯರ ಹಿತವನ್ನು ಬಯಸುತ್ತವೆ. ಅಷ್ಟೇ ಅಲ್ಲದೇ ಸಹಕಾರಿಗಳು ಸಹಕಾರದ ಮನೋಭಾವ ಎಲ್ಲರಲ್ಲೂ ಮೂಡಿಸುತ್ತಾರೆ, ನನ್ನೊಲವಿನ ಸಹಕಾರಿಯು ತನ್ನ ಏಳಿಗೆಯನ್ನು ಬಯಸದೆ ಬೇರೆಲ್ಲರನ್ನೂ ಏಳಿಗೆಯತ್ತ ಕೊಂಡೊಯ್ಯಲು ಪ್ರಯತ್ನಿಸು ತ್ತಿದೆ. ಸಹಕಾರಿಯು ವಿಪತ್ತಿನಲ್ಲಿರುವ ಹಾಗೂ ತೊಂದರೆ ಯಲ್ಲಿರುವವರನ್ನು ಸಂಪೂರ್ಣವಾಗಿ ಗಮನಿಸಿ ತನ್ನ ಸಹಾಯ ಹಸ್ತ ಚಾಚುತ್ತಿದೆ. ಸಹಕಾರಿಯು ಮೊನ್ನೆ ಕೇದಾರನಾಥದಲ್ಲಿ ನಡೆದ ಪ್ರಕೃತಿ ವಿಕೋಪ ಇದಕ್ಕೂ ಕೂಡಾ ಸಹಾಯ ಹಸ್ತ ಚಾಚಿರುವುದು ಮನಸ್ಸಿಗೆ ಹೆಮ್ಮೆ ಅನಿಸುತ್ತಿದೆ. ಸಹಕಾರಿಯು ದುಃಖದಿಂದ ಕೂಡಿರುವ ಎಲ್ಲರನ್ನು ಸಂತೈಸುವ ಪ್ರಯತ್ನ ಮಾಡುತ್ತಿದೆ ಮನಸ್ಸಲ್ಲಿ ಒಂದು ರೀತಿಯ ಮನೋಭಾವನೆಯನ್ನು ಮೂಡಿಸುತ್ತಿದೆ. ಅಷ್ಟೇ ಅಲ್ಲದೇ ಬರುವ ಗ್ರಾಹಕರನ್ನು ತನ್ನ ಮನೆಯವರಂತೆ ಕಾಣುತ್ತಿದೆ. ರುಪಾಯಿ ಮೌಲ್ಯ ಏರಿಕೆಯನ್ನು ತಡೆಯೊಡ್ಡಲು ಸಹಕಾರಿಯು ಪ್ರಯತ್ನ ಮಾಡುತ್ತಿದೆ. ಇಲ್ಲಿ ಸಹಕಾರಿಯ ಪಾತ್ರವೂ ಮುಖ್ಯ. ಸಹಕಾರಿಯ ಶ್ಲಾಘಯ ಕಾರ್ಯಕ್ಕೆ ನನ್ನದೊಂದು ಸಲಾಂ.

– **ಭುವನೇಶ ಪ್ರಭು,** ನಿರ್ಮಾಣ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಉಡುಪಿ.

---

**ಸಂಯುಕ್ತ ಸಹಕಾರಿಗೆ ಹಿರಿಯರ ಭೇಟಿ :**

ಜುಲೈ ಸ್ವಾಭಿಮಾನಿಯಲ್ಲಿ ಮಾಜಿ ಸಹಕಾರಿ ಸಚಿವರು ಸಂಯುಕ್ತ ಸಹಕಾರಿಗೆ ಭೇಟಿ ನೀಡಿದ ಹಾಗೂ ಅವರು ನೀಡಿದ ಮಾರ್ಗದರ್ಶನವನ್ನು ಶೋಷಣಾ ರಹಿತ ಮಹಿಳಾ ಸಮಾಜ ಮತ್ತು ಸ್ವಾಸ್ಥ ಸಮಾಜ ರಚನೆ ಬಗ್ಗೆ ಹೇಳಿರುವುದು ನಿಜಕ್ಕೂ ಈಗಿನ ಕಾಲದಲ್ಲಿ ಇಂತಹ ಮಹನೀಯರು ಇದ್ದಾರೆ ಎಂಬುದನ್ನು ಸ್ವಾಭಿಮಾನಿ ಸಹಕಾರಿ ಪ್ರತಿಕೆಯಿಂದ ಓದಿ ತಿಳಿದೆ. ತುಂಬಾ ಸಂತೋಷ. ಸ್ವಾಭಿಮಾನಿ ಸಹಕಾರಿಯ ಮುಖ ಪುಟವು ಕಾಲಕ್ಕೆ ತಕ್ಕಂತೆ ಚಿತ್ರಗಳನ್ನು ನಮೂದಿಸುತ್ತಿರುವುದು ಬಹಳ ಅಚ್ಚುಕಟ್ಟುತನ ಕಾಣುತ್ತಿದೆ. ಧನ್ಯವಾದಗಳು.

– **ಅನಿತ ಸುಭಾಷ್ ಶಿರಾಳಕೊಪ್ಪ.**

# ಹಾನಗಲ್ಲ: ಆದರ್ಶ ಪತ್ತಿನ ಸೌಹಾರ್ದ ಸಹಕಾರಿಯ ನೂತನ ಕಟ್ಟಡ ಉದ್ಘಾಟನೆ



ದಿ : 09.06.2013ರಂದು ಹಾವೇರಿ ಜಿಲ್ಲೆಯ ಆದರ್ಶ ಪತ್ತಿನ ಸೌಹಾರ್ದ ಸಹಕಾರಿ ಹಾನಗಲ್ಲ ಇದರ ನೂತನ ಕಟ್ಟಡದ ಉದ್ಘಾಟನೆಯನ್ನು ಕರ್ನಾಟಕ ಸರಕಾರದ ಮಾಜಿ ಸಚಿವರಾದ ಶ್ರೀ ಸಿ.ಎಂ ಉದಾಸಿಯವರು ನೆರವೇರಿಸಿ ಶುಭ ಕೋರಿದರು. ಸಮಾರಂಭದಲ್ಲಿ ಸಂಸದ ಶ್ರೀ ಶಿವಕುಮಾರ ಉದಾಸಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶ್‌ಚಂದ್ರ. ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ್, ಸುಕೋ ಬ್ಯಾಂಕ್ ಅಧ್ಯಕ್ಷ ಶ್ರೀ ಮನೋಹರ್ ಮಸ್ಕಿ, ವಿಕಾಸ ಬ್ಯಾಂಕ್ ಅಧ್ಯಕ್ಷ ಶ್ರೀ ವಿಶ್ವನಾಥ ಹಿರೇಮಠ , ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ರಾವ ಸಾಹೆಬ್ ಪಾಟೀಲ್, ಶ್ರೀ ಆರ್ ಎನ್ ದೇಶಪಾಂಡ, ಶ್ರೀ ಬಿ.ಎಸ್. ಕೃಷ್ಣಾರೆಡ್ಡಿ, ಹಿರಿಯ ಸಹಕಾರಿಗಳಾದ ಶ್ರೀ ಮಂಜುನಾಥ ಸಿದ್ದಾಪುರ ಶ್ರೀ ಬಿ.ಎಸ್. ಸುಲ್ತಾನ್‌ಪುರಿ ಮುಂತಾದವರು ಉಪಸ್ಥಿಸರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿ ಅಧ್ಯಕ್ಷ ಎಂ.ಬಿ.ಕಲಾಲರವರು ವಹಿಸಿದ್ದರು. ಶ್ರೀ ಮನೋಹರ್ ಮಸ್ಕಿಯವರು ಸಹಕಾರಿಯ ನಾಮ ಫಲಕವನ್ನು ಅನಾವರಣ ಗೊಳಿಸಿದರು ಶ್ರೀ ರಾವ ಸಾಹೆಬ್ ಪಾಟೀಲ್‌ರವರಿಂದ ಸ್ಟ್ರಾಂಗ್ ರೋಮ್ ಉದ್ಘಾಟನೆ ,ಶ್ರೀ ಎಸ್.ಆರ್. ಸತೀಶ್‌ಚಂದ್ರರವರಿಂದ ಜನೆರಲ್ ಕೌಂಟರ್ ಉದ್ಘಾಟನೆ, ಶ್ರೀ ವಿಶ್ವನಾಥ ಹಿರೇಮಠರವರಿಂದ ಆಡಳಿತ ಮಂಡಳಿ ಸಭಾಂಗಣ ಉದ್ಘಾಟನೆ, ಶ್ರೀ ಗುರುನಾಥ ಜ್ಯಾಂತಿಕರ್‌ವರಿಂದ ನಗದು ಕೌಟರ್‌ನ್ನು ಉದ್ಘಾಟನೆ, ಶ್ರೀ ಕೃಷ್ಣಾರೆಡ್ಡಿರವರಿಂದ ಇ–ಸ್ಟಾಂಪಂಗ್ ವಿಭಾಗದ ಉದ್ಘಾನೆಯನ್ನು ಮಾಡಿದರು.

ಈ ಸಹಕಾರಿಯು ವಿವಿಧ ರೀತಿಯಾ ಸಾಲ ಹಾಗೂ ಬಂಗಾರ ಸಾಲ ನೀಡುವುದರ ಜೊತೆಗೆ ಕಿರು ಹಣಕಾಸು ಯೋಜನೆಯಲ್ಲಿ 1 ಕೋಟಿ 10 ಲಕ್ಷ ರೂ. ಗಳ ಸಾಲವನ್ನು ನೀಡಿದ್ದು ಸಾಲ ವಸೂಲಾತಿ ಶೇಕಡ ನೂರಕ್ಕೆ ನೂರು ಇರುವುದು ಸಹಕಾರಿಯ ವಿಶೇಶವಾಗಿದೆ ಎಂದು ಸಹಕಾರಿಯ ಅಧ್ಯಕ್ಷ ಶ್ರೀ ಎಂ.ಬಿ. ಕಲಾಲರವರು ತಿಳಿಸಿದರು.

## ನಬಾರ್ಡ್ ಚಿಂತನೆ : ಅಲ್ಪಾವಧಿ ಕೃಷಿ ಸಾಲ ವ್ಯವಸ್ಥೆ 2 ಹಂತಗಳಲ್ಲಿ ಜಾರಿ

### ಡಿ.ಸಿ.ಸಿ. ಬ್ಯಾಂಕು/ ಅಪೆಕ್ಸ್ ಬ್ಯಾಂಕಿನ ವ್ಯವಹಾರಿಕ ಕೇಂದ್ರಗಳಾಗಿ ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯನಿರ್ವಹಣೆ

**ಹಾಲಿ ಜಾರಿಯಲ್ಲಿರುವ ಮೂರು ಹಂತಗಳ ಬದಲಿಗೆ ಎರಡು ಹಂತಗಳ ವ್ಯವಸ್ಥೆಯನ್ನು ಜಾರಿ ಮಾಡುವ ಉದ್ದೇಶವನ್ನು ನಬಾರ್ಡ್ ಚಿಂತನೆ ಮಾಡುತ್ತಿದೆ.**

ದಿನಾಂಕ : 22 ಜುಲೈ 2013ರಲ್ಲಿ ನಬಾರ್ಡ್ ಹೊರಡಿಸಿದ ಸುತ್ತೋಲೆಯಂತೆ ಪ್ರಾಥಮಿಕ ಸಹಕಾರ ಸಂಘಗಳು ಸಾಲವನ್ನು ನೀಡುವಂತಿಲ್ಲ ಹಾಗೂ ಠೇವಣಿಗಳನ್ನೂ ಸಂಗ್ರಹಿಸುವಂತಿಲ್ಲ, ಇವು ಕೇವಲ ಡಿಸಿಸಿ ಬ್ಯಾಂಕುಗಳ ಅಥವಾ ಸ್ಟೇಟ್ ಕೋ–ಆಪರೇಟೀವ್ ಬ್ಯಾಂಕುಗಳ ವ್ಯವಹಾರಿಕ ಸೇವಾ ಕೇಂದ್ರಗಳಾಗಿ ಮಾತ್ರ ಕಾರ್ಯನಿರ್ವಹಿಸಬೇಕು ಹಾಲಿ ಇರುವ ಠೇವಣಿಗಳನ್ನು ಹಾಗೂ ಸಾಲಗಳನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ / ಅಪೆಕ್ಸ ಬ್ಯಾಂಕಿಗೆ ವರ್ಗಾಯಿಸಬೇಕು. ಉಳಿದಂತೆ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ದಿನ ನಿತ್ಯದ ವ್ಯವಹಾರಗಳನ್ನು ಸ್ವಂತಕ್ಕಾಗಿ ಮಾಡಬಹುದಾಗಿದೆ. ಕೃಷಿ ಪತ್ತಿನ ಸಹಕಾರ ಸಂಸ್ಥೆಗಳನ್ನು ಬಲಪಡಿಸುವ ದೃಷ್ಟಿಯಿಂದ, ರೈತರಿಗೆ ಹೆಚ್ಚಿನ ಕೃಷಿಸಾಲದ ನೆರವನ್ನು ಒದಗಿ ಸುವ ದೃಷ್ಟಿಯಿಂದ ಈ ವ್ಯವಸ್ಥೆ ಅಗತ್ಯವೆಂದು ನಬಾರ್ಡ್ ಅಭಿಪ್ರಾಯ ಪಡುತ್ತದೆ.

ಆದರೆ ಈ ವ್ಯವಸ್ಥೆ ಕೃಷಿ ಪತ್ತಿನ ಸಹಕಾರ ಸಂಘಗಳ ಅಸ್ತಿತ್ವಕ್ಕೆ ಬಾಧೆ ತರುತ್ತದೆ ಆದ್ದರಿಂದ ಈ ವ್ಯವಸ್ಥೆ ಸಾಧುವಲ್ಲವೆಂದು ಸಹಕಾರಿಗಳು ಅಭಿಪ್ರಾಯಪಡುತ್ತಾರೆ.

# ಸಕಾಲ ಯೋಜನೆ – ವೆಬ್‌ತಾಣ

http://sakala.kar.nic.in/ (http://www.kgsc.kar.nic.in)

■ ರಘುನಂದನ ಕೆ.
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

http://ricmbangalore.org/

ಆಧುನಿಕ ತಂತ್ರಜ್ಞಾನದ ಸೌಲಭ್ಯಗಳು ಅಂತರ್ಜಾಲವನ್ನೂ ಸೇರಿದಂತೆ ಅನೇಕ ಮಾಹಿತಿಗಳನ್ನು ಸುಲಭವಾಗಿ ಪ್ರತಿಯೊಬ್ಬರಿಗೂ ತಲುಪಿಸುವಲ್ಲಿ ಸಹಾಯಕವಾಗುತ್ತಿವೆ. ಸಾರ್ವಜನಿಕ ಕ್ಷೇತ್ರ ಹಾಗೂ ಸೇವಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ಅಂತರ್ಜಾಲದ ಮೂಲಕ ಜನ ಸಾಮಾನ್ಯರನ್ನು ತಲುಪುವ ಪ್ರಯತ್ನ ಮಾಡುತ್ತಿವೆ. ಈ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೂ ಕೂಡ ಕಾರ್ಯಪ್ರವೃತ್ತವಾಗಿದ್ದು, ಶೀಘ್ರ ತಲುಪುವಿಕೆ ಹಾಗೂ ಆಡಳಿತದಲ್ಲಿ ಪಾರದರ್ಶಕತೆಯನ್ನು ಹೊಂದುವ ಸಲುವಾಗಿ ಅನೇಕ ಯೋಜನೆಗಳನ್ನು ಅಂತರ್ಜಾಲದ ಮೂಲಕ ಸಾರ್ವಜನಿಕರಿಗೆ ತಲುಪಿಸುವ ಪ್ರಯತ್ನ ಮಾಡುತ್ತಿವೆ.

ಜನಸಾಮಾನ್ಯರಿಗೆ ಅತ್ಯಗತ್ಯ ಸೇವೆಗಳನ್ನು ಒದಗಿಸುವಲ್ಲಿ ಆಗುತ್ತಿದ್ದ ವಿಳಂಬವನ್ನು ತಪ್ಪಿಸಿ ನಿಗದಿತ ಸಮಯದಲ್ಲಿ ಸೇವೆಗಳನ್ನು ಒದಗಿಸುವ ಮತ್ತು ಆಡಳಿತದಲ್ಲಿ ಪಾರದರ್ಶಕತೆಯನ್ನು ತರುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರ "ಕರ್ನಾಟಕ ಸಕಾಲ ಸೇವೆಗಳ ಕಾಯ್ದೆ 2011"ನ್ನು ರೂಪಿಸಿ ಮಾರ್ಚ್ 2012ರಿಂದ ಜಾರಿಗೆ ತಂದಿದೆ. ರಾಜ್ಯ ಸರ್ಕಾರದ 18 ಇಲಾಖೆಗಳ 265ಕ್ಕೂ ಹೆಚ್ಚಿನ ಸೇವೆಗಳನ್ನು ಈ ಕಾಯ್ದೆಯ ವ್ಯಾಪ್ತಿಯಲ್ಲಿ ತರಲಾಗಿದ್ದು ಈ ಯೋಜನೆಗೆ "ಸಕಾಲ" ಎಂದು ಹೆಸರಿಸಲಾಗಿದೆ. ವಾಣಿಜ್ಯ ಪರವಾನಗಿ, ಪಡಿತರ ಚೀಟಿ ನೀಡುವುದು, ವಾಹನಗಳ ನೋಂದಣಿ, ಜಾತಿ, ಆದಾಯ, ಭೂಮಿಯ ಮೇಲಿನ ಹಕ್ಕುಗಳ ಪ್ರಮಾಣ ಪತ್ರ, ನೀರು ಮತ್ತು ಒಳಚರಂಡಿಗಳ ಸಂಪರ್ಕ, ಆಸ್ತಿಯ ಖಾತಾ ನೀಡಿಕೆ, ಕಟ್ಟಡ ನಕ್ಷೆ ಅನುಮೋದನೆ, ಬೀದಿದೀಪಗಳು ಹಾಗೂ ಕುಡಿಯುವ ನೀರಿನ ನಿರ್ವಹಣೆ ಸೇರಿದಂತೆ ಮತ್ತಿತರ ಅನಿವಾರ್ಯ ಸೇವೆಗಳು ಈ ಯೋಜನೆಯಲ್ಲಿ ನಿಗದಿತ ಸಮಯದಲ್ಲಿ ಲಭ್ಯವಾಗಲಿದೆ.

**ವೆಬ್‌ತಾಣ 14 : http://sakala.kar.nic.in/ (http://www.kgsc.kar.nic.in)**

ಈ ಯೋಜನೆಯನ್ನು ಯಶಸ್ವಿಯಗೊಳಿಸಲು ಹಾಗೂ ಸಾರ್ವಜನಿಕರಿಗೆ ತಲುಪುವ ದೃಷ್ಟಿಯಿಂದ ಸರ್ಕಾರ ಪ್ರತ್ಯೇಕ ತಂತ್ರಾಂಶವನ್ನು ಹಾಗೂ ವೆಬ್‌ತಾಣವನ್ನು ಸಿದ್ಧಪಡಿಸಿದೆ. ಈ ಯೋಜನೆಯ ಹೆಚ್ಚಿನ ಮಾಹಿತಿಯನ್ನು ವೆಬ್‌ತಾಣದಲ್ಲಿ ನೋಡಬಹುದು.

- ನಾಗರಿಕ ಸೇವಾ ಖಾತರಿ ಅಧಿನಿಯಮ (ಸಕಾಲ) ಕಾಯ್ದೆ, ಅನುಸೂಚಿಗಳು ಹಾಗೂ ನಿಯಮಗಳನ್ನು ಈ ವೆಬ್‌ತಾಣದಲ್ಲಿ ಪಡೆಯಬಹುದು.
- ಸಕಾಲ ಯೋಜನೆಯಡಿ ಸೇರಿಸಲಾಗಿರುವ ಸರ್ಕಾರದ ಇಲಾಖೆಗಳು, ಕಛೇರಿ ವಿವರ ಹಾಗೂ ಇವುಗಳ ವೆಬ್‌ತಾಣಗಳ ಲಿಂಕ್‌ಗಳು, ಈ ಯೋಜನೆಯಲ್ಲಿ ದೊರೆಯುವ ಇಲಾಖಾವಾರು ಸೇವೆಗಳ ಪಟ್ಟಿಯನ್ನು ಈ ವೆಬ್‌ತಾಣದಿಂದ ಪಡೆದುಕೊಳ್ಳಬಹುದು.
- ಸಕಾಲ ಯೋಜನೆಯಡಿ ಅರ್ಜಿ ಸಲ್ಲಿಸಲಾಗುವ ಸೇವೆಗಳ ಕಾರ್ಯ ವಿಧಾನ, ಅರ್ಜಿ ಸಲ್ಲಿಸುವ ಪ್ರಕ್ರಿಯೆಯ ಮಾಹಿತಿ, ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು, ನಿಗದಿಪಡಿಸಿದ ಶುಲ್ಕ, ಕಾಲಾವಧಿ, ಕಾರ್ಯ ಪ್ರಗತಿಯ ವಿವರ, ಸಕ್ಷಮ ಪ್ರಾಧಿಕಾರದ ಮಾಹಿತಿ ಇತ್ಯಾದಿಗಳನ್ನು ಆಯಾ ಸೇವೆಗೆ ಸಂಬಂಧಿಸಿದಂತೆ ಪಡೆಯಬಹುದು.
- ಸಕಾಲ ಆಡಳಿತ ವ್ಯವಸ್ಥೆಯ ಸಂಪರ್ಕ ಮಾಹಿತಿ, ಸರ್ಕಾರದ ಇಲಾಖೆಗಳ ವಿವಿಧ ನಮೂನೆ ಹಾಗೂ ಪ್ರಮಾಣ ಪತ್ರಗಳ ಮಾದರಿ, ಸದಾಕಾಲ ಮಾಹಿತಿ ಒದಗಿಸುವ ಕಾಲ್‌ಸೆಂಟರ್ ಸಂಪರ್ಕ ಮಾಹಿತಿಯನ್ನು ಈ ವೆಬ್‌ತಾಣದಲ್ಲಿ ನೋಡಬಹುದು.
- ಸಕಾಲ ಗಡಿಯಾರ, ಅರ್ಜಿ ಸಲ್ಲಿಸಿದ ಕೋರಿಕೆಯ ಸೇವೆಗೆ ಒದಗಿಸಲಾದ ಜಿಎಸ್‌ಸಿ ಸಂಖ್ಯೆ ನಮೂದಿಸಿ ಸೇವೆಯ ಸ್ಥಾನ ಮಾನ ಪರಿಶೀಲನೆಯನ್ನು ಈ ವೆಬ್‌ತಾಣದಲ್ಲೇ ಮಾಡಿಕೊಳ್ಳಬಹುದು.
- ಸಕಾಲಕ್ಕೆ ಸಂಬಂಧಿಸಿದ ಪ್ರಶ್ನೋತ್ತರಗಳು, ಸಾರ್ವಜನಿಕ ವರದಿ, ಜಿಲ್ಲಾವಾರು/ಇಲಾಖಾವಾರು ಸೇವೆಯ ಕೋರಿಕೆ ಹಾಗೂ ವಿಲೇವಾರಿ ಮಾಹಿತಿ, ಪ್ರತಿ ಮಾಹೆಯ ಕಾರ್ಯಪ್ರಗತಿಯ ವರದಿ, ಸಕಾಲಕ್ಕೆ ಸಂಬಂಧಿಸಿದ ದೂರುಗಳು ಹಾಗೂ ಅದರ ಕಾರ್ಯಪ್ರಗತಿಯ ಮಾಹಿತಿಯನ್ನು ಈ ವೆಬ್‌ತಾಣದಲ್ಲಿ ನೋಡಬಹುದು.
- ಸಕಾಲಕ್ಕೆ ಸಂಬಂಧಿಸಿದ ಆಡಿಯೋ, ವಿಡಿಯೋ ವಾರ್ತೆಗಳನ್ನು, ಇ ಜನಸ್ಪಂದನದ ಮಾಹಿತಿಗಳನ್ನು ಈ ವೆಬ್‌ತಾಣದಲ್ಲಿ ನೋಡಬಹುದು.
- ಸಕಾಲ "ಸೇವಾ ಪೂರೈಕೆದಾರ"ರ ನೇಮಕಾತಿಯ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಸೇವಾ ಪೂರೈಕೆದಾರರಾಗ ಬಯಸುವವರು ಮಾಡಿಕೊಳ್ಳಬೇಕಾದ ಒಪ್ಪಂದದ ಪ್ರತಿಯನ್ನು ಕೂಡ ಈ ವೆಬ್‌ತಾಣದಿಂದ ಪಡೆದುಕೊಳ್ಳಬಹುದು.

ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆಯಾದ 'ಸಕಾಲ'ವನ್ನು ಸಾರ್ವಜನಿಕರಿಗೆ ಮತ್ತಷ್ಟು ಸುಲಭವಾಗಿ ತಲುಪಿಸಲು ಹಾಗೂ ಅರ್ಜಿ ಸಲ್ಲಿಕೆಯ ಪ್ರಕ್ರಿಯೆಯನ್ನು ಸರಳೀಕರಣಗೊಳಿಸುವುದಕ್ಕಾಗಿ "ಸೇವಾ ಪೂರೈಕೆದಾರ"ರನ್ನು ನೇಮಕ ಮಾಡಲು ನಿರ್ಧರಿಸಲಾಗಿದ್ದು, ಸೇವಾ ಪೂರೈಕೆದಾರರ ನೇಮಕಾತಿಯ ಅಧಿಕಾರವನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಈಗಾಗಲೇ ಇ ಸ್ಟ್ಯಾಂಪಿಂಗ್ ಸೇವೆಯನ್ನು ಯಶಸ್ವಿಯಾಗಿ ಸಾರ್ವಜನಿಕರಿಗೆ ಒದಗಿಸುತ್ತಿರುವ ಸಹಕಾರ ಕ್ಷೇತ್ರವು ಸಕಾಲ ಯೋಜನೆಯಡಿ ಸೇವಾ ಪೂರೈಕೆದಾರರಾಗಿ ಕಾರ್ಯನಿರ್ವಹಿಸಲು ಅವಕಾಶವಿದ್ದು ಇದನ್ನು ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ. ■

# ಸಹಕಾರ ಕ್ಷೇತ್ರದಲ್ಲಿ ಸದಸ್ಯರ ಅರಿವು ಮತ್ತು ವೃತ್ತಿಪರತೆ - ಸಂಪನ್ಮೂಲಗಳ ಮತ್ತು ಮನಸ್ಥಿತಿಯ ಬದಲಾವಣೆಯ ಅಗತ್ಯತೆ

ಮೂಲ : ಡಾ॥ ದಮನ್ ಪ್ರಕಾಶ್, ಅನುವಾದ : ದಿವ್ಯ ಐ.

ಸಮಗ್ರ ಸಹಕಾರ ವ್ಯವಸ್ಥೆಯನ್ನು ತ್ವರಿತವಾಗಿ ಎಚ್ಚರಿಸುವ ಹಾಗೂ ಇಡೀ ಚಳುವಳಿಯು ಹೊಸ ಸವಾಲುಗಳನ್ನು ಎದುರಿಸುವ ಸರಿಯಾದ ಸಮಯ ಇದಾಗಿದೆ. 97ನೇ ಸಂವಿಧಾನ ತಿದ್ದುಪಡಿಯ ಮೂಲಕ ಒದಗಿಸಿರುವ ಸುವರ್ಣ ಅವಕಾಶವನ್ನು ತೆಳುವಾದ ಗಾಳಿಯಲ್ಲಿ ಆವಿಯಾಗುವ ಅವಕಾಶವನ್ನು ಬಿಟ್ಟು ಕೊಡಬಾರದು. ಈ ಬಗ್ಗೆ ಚಿಂತನೆ ಅಗತ್ಯ.

ಇತ್ತೀಚಿನ ಭಾರತೀಯ ಸಂವಿಧಾನದ 97ನೇ ತಿದ್ದುಪಡಿಯಲ್ಲಿ ಭಾರತೀಯ ಸಹಕಾರ ಚಳುವಳಿಗೆ ಒಂದು ಬಲವಾದ, ಸ್ವಾಯತ್ತವಾದ, ಕಾರ್ಯಸಾಧ್ಯವಾದ, ವೃತ್ತಿಪರವಾದ-ಸ್ಪರ್ಧಾತ್ಮಕವಾದ ಮತ್ತು ವಿಶಾಲವಾದ ಸದಸ್ಯರಿಗೆ ಹಾಗೂ ಸಮುದಾಯಕ್ಕೆ ಸೂಕ್ತವಾದ ಸೇವೆಯನ್ನು ಸಲ್ಲಿಸಲು ಮತ್ತು ನೇರ ಹಾಗೂ ತಾರ್ಕಿಕ ಮಾರ್ಗವನ್ನು ಒದಗಿಸಲು ಪ್ರಯತ್ನಿಸಲಾಗಿದೆ. ಈ ತಿದ್ದುಪಡಿಯ ಗರಿಷ್ಠ ಪ್ರಯೋಜನವನ್ನು ಪಡೆಯುವ ದೊಡ್ಡ ಜವಾಬ್ದಾರಿಯು ಭಾರತೀಯ ಸಹಕಾರಿ ನಾಯಕರ ಮೇಲಿದೆ. ಮೂರು ಪ್ರಮುಖ ಸಮಸ್ಯೆಗಳು ಭಾರತೀಯ ಸಹಕಾರ ಚಳುವಳಿಯನ್ನು ಸ್ಪಷ್ಟವಾಗಿ ಕೆಳಕ್ಕಿಳಿಸಲಾಗುತ್ತಿದೆ. (i) ಬಲವಾದ, ಶಕ್ತಿಶಾಲಿಯಾದ ಮತ್ತು ಸ್ವಾಯತ್ತವಾದ ಸಂಘಟನೆ. (ii) ವೃತ್ತಿ ನಿರ್ವಹಿಸುತ್ತಿದ್ದ ವ್ಯಾಪಾರ ಉದ್ಯಮಗಳ ಖಾತರಿ. ಮತ್ತು (iii) ಸದಸ್ಯರಿಗೆ ವ್ಯವಹಾರ ಮತ್ತು ಸೇವೆಗಳನ್ನು ನಿರ್ವಹಿಸುವಲ್ಲಿ ಸಾಂಪ್ರದಾಯಿಕತೆಯಿಂದ ಹೊರಬರುವುದು. ಈ ತಿದ್ದುಪಡಿಯ ನಿರೀಕ್ಷೆ ಎಂದರೆ ಸರ್ಕಾರ ಮತ್ತು ಚಳುವಳಿಯು ಜಂಟಿಯಾಗಿ ಕಾರ್ಯನಿರ್ವಹಿಸುವುದರ ಮೂಲಕ 'ನಿರಾಶದಾಯಕ ಮತ್ತು ತೋರಿಕೆಯಲ್ಲಿ ದಣಿದ ಮತ್ತು ವಿರೂಪಗೊಂಡ' ಸಹಕಾರ ಚಳುವಳಿಯ ಚಿತ್ರವನ್ನು ನವೀಕರಿಸುವುದಾಗಿದೆ. ಈ ಸಾಹಸೋದ್ಯಮದ ಮೂರು ಪ್ರಮುಖ ಅಂಶಗಳೆಂದರೆ, (i) ಉನ್ನತ ಮಟ್ಟದಲ್ಲಿ ಸದಸ್ಯರ ಅರಿವು ಮೂಡಿಸುವುದು. (ii) ವೃತ್ತಿಪರವಾಗಿ ಸಮರ್ಥರಾದ ವ್ಯವಸ್ಥಾಪಕರ ಮತ್ತು ಆಡಳಿತ ಮಂಡಲಿ ಸದಸ್ಯರ ಒಂದು ವರ್ಗವನ್ನು ಸೃಷ್ಟಿಸುವುದು. ಮತ್ತು (iii) ರಾಜ್ಯ ಸರ್ಕಾರಗಳು ಮತ್ತು ಅವುಗಳ ಅಧಿಕಾರಿಗಳ ಸಮರ್ಪಕ ಕಾರ್ಯನಿರ್ವಹಣೆಯನ್ನು ಪ್ರತಿಬಿಂಬಿಸಲ್ಪಡುವುದು.

ರಾಜ್ಯ ಸರ್ಕಾರವು ಅಲ್ಲಿನ ಪರಿಸ್ಥಿತಿಗಳಿಗನುಗುಣವಾಗಿ ಸೂಕ್ತ ಕಾನೂನನ್ನು ತರುವುದರ ಮೂಲಕ ಉತ್ತಮ ಕೆಲಸವನ್ನು ಮಾಡಿದೆ, ಇದು ಈಗ ಚಳುವಳಿಯ ನಿರೀಕ್ಷೆಗಳು ಜೊತೆಗೆ ಎದ್ದುನಿಲ್ಲಬೇಕೆಂಬುದು ಅರಿವಾಗಿದೆ ಮತ್ತು ರಾಜ್ಯದ ಕಾನೂನುಗಳು ಮತ್ತು ಸರ್ಕಾರದ ಕಾರ್ಯಕರ್ತರು ಹೇಗೆ ಕಾರ್ಯ ನಿರ್ವಹಿಸುತ್ತಾರೆ ಎಂಬುದರ ಆಧಾರದ ಮೇಲೆ ತಿದ್ದುಪಡಿಯ ಆಶಯಗಳ ಜಾರಿಯು ಅವಲಂಬಿಸಿದೆ.

**ಸದಸ್ಯರ ನಂಬಿಕೆ ಮತ್ತು ನಿಷ್ಠೆ :** ಒಂದು ಸಹಕಾರ ಸಂಸ್ಥೆಯ ಬಲವು ಸದಸ್ಯರಿಗೆ ತಮ್ಮ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಅರಿವುಂಟು ಮಾಡುವುದು ಹಾಗೂ ಸಹಕಾರ ಕ್ಷೇತ್ರದಲ್ಲಿ ಸ್ವತಃ ತಮ್ಮ ಹಕ್ಕನ್ನು ಮತ್ತು ಸಹಕಾರಿ ಸೇವೆಗಳ ಪೀಳಿಗೆಯ ಸಾಮರ್ಥ್ಯಗಳ ನಿಜವಾದ ಅರಿವುಂಟು ಮಾಡುವುದರಲ್ಲಿ ಅಡಗಿದೆ ಎಂಬುದನ್ನು ಸಾರ್ವತ್ರಿಕವಾಗಿ ಒಪ್ಪಲಾಗಿದೆ. ಒಂದು ಮೂಲ ಅಂಶವೆಂದರೆ ಸದಸ್ಯರು ತಮ್ಮ ಸಂಸ್ಥೆಯ ಮೇಲೆ ನಂಬಿಕೆಯನ್ನು ಹೊಂದಿರಬೇಕು. ನಂಬಿಕೆಯು ದಕ್ಷತೆ ಮತ್ತು ಪಾರದರ್ಶಕತೆಯನ್ನು ಅವಲಂಬಿಸಿರುತ್ತದೆ. ಇದರಲ್ಲಿ ಸದಸ್ಯರ ಅಗತ್ಯತೆಗಳನ್ನು ವೃತ್ತಿಪರವಾಗಿ ಮತ್ತು ಜವಾಬ್ದಾರಿಯುತವಾಗಿ ಪೂರೈಸುವುದಾಗಿದೆ. ನಂಬಿಕೆಯು ನಿಷ್ಠೆಯನ್ನು ಸೃಷ್ಟಿಸುತ್ತದೆ.

ಸಹಕಾರ ಸಂಸ್ಥೆಗಳ ಸಮರ್ಪಕ ಉದ್ದೇಶ ತಿಳಿದವರಿಂದ ಮತ್ತು ಅನುಭವಿ ತರಬೇತುದಾರರಿಂದ ಅರಿಯುವುದು ಅಗತ್ಯ. ಸಹಕಾರಿಯು ಸದಸ್ಯರ ಸೇವಕ ಮತ್ತು ಸದಸ್ಯರ ಬಾಸ್ ಅಲ್ಲ ಎಂಬ ಅಂಶವನ್ನು ಗಮನದಲ್ಲಿಡುವುದು ಅವಶ್ಯಕ. ನಿಯಮಿತವಾದ ಸದಸ್ಯರ ಶಿಕ್ಷಣ ಕಾರ್ಯಕ್ರಮಗಳನ್ನು ನೀಡುವುದರ ಮೂಲಕ ನಿಷ್ಠೆ ಮತ್ತು ನಂಬಿಕೆಗೆ ಭರವಸೆಯನ್ನು ಮೂಡಿಸಬೇಕು. ಸಹಕಾರಿಯ ಸೇವೆಗಳನ್ನು ಸದಸ್ಯರು ಸಮರ್ಥವಾಗಿ ಉಪಯೋಗಿಸಿಕೊಂಡಾಗ ಮಾತ್ರ ಸಹಕಾರಿಯು ಹಸನಾಗಿ ಬೆಳೆಯುತ್ತದೆ. ಸದಸ್ಯರ ವಾಸ್ತವದ ಅಗತ್ಯತೆಗಳನ್ನು ಗುರುತಿಸುವುದು ಹಾಗೂ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದನ್ನು ಖಚಿತಪಡಿಸಿ ಕೊಳ್ಳುವುದು ಸಹಕಾರಿ ನಾಯಕರುಗಳ ಪ್ರಮುಖ ಪಾತ್ರವಾಗಿದೆ.

ಸದಸ್ಯರ ಶಿಕ್ಷಣವು ಸಹಕಾರದ ತತ್ವ ಮತ್ತು ಗುಣವಿಶೇಷಗಳ ಮೇಲೆ ಮಾತ್ರ ಕೇಂದ್ರೀಕೃತವಾಗಿಲ್ಲ. ಇದು ಸದಸ್ಯರ ವೃತ್ತಿ ಮತ್ತು ಅಗತ್ಯತೆಗಳಿಗೆ ಸ್ಪಂದಿಸುವ ಅಗತ್ಯವಿದೆ. ಜೊತೆಗೆ ಸದಸ್ಯರ ಶಿಕ್ಷಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಬಳಸುವ ಸಾಮಾಗ್ರಿಗಳು ಮತ್ತು ಸಂಪನ್ಮೂಲಗಳು ಕೂಡ ಮುಖ್ಯವಾಗಿರುತ್ತದೆ. ಸೂಕ್ತ ಸಾಮಾಗ್ರಿಗಳು, ಶ್ರವಣ ಮತ್ತು ದೃಕ್-ಶ್ರವಣ ಸಾಧನಗಳು, ಸೂಕ್ತ ಮತ್ತು ಅರ್ಹ ಸಂಪನ್ಮೂಲ ವ್ಯಕ್ತಿಗಳು ಹಾಗೂ ತರಬೇತಿ ಪರಿಸರ ಸಹ ಪ್ರಮುಖವಾಗಿರುತ್ತವೆ. ಇಂತಹ ಅಂಶಗಳನ್ನು ಸಹಕಾರಿ ಸಂಸ್ಥೆಗಳು ಅಳವಡಿಸಿಕೊಂಡಲ್ಲಿ ಕೆಲವು ಉಪಯೋಗ ಮತ್ತು ಪ್ರಸಕ್ತತೆಗೆ ಉತ್ತಮ ಅವಕಾಶಗಳಿವೆ.

**ತರಬೇತಿ ಸಂಪನ್ಮೂಲಗಳು :** ದೇಶದ ಜನಸಂಖ್ಯೆಯಲ್ಲಿ ವಯಸ್ಕರ ದೊಡ್ಡ ಪಡೆಯು (ರಾಷ್ಟ್ರೀಯ ಜನಸಂಖ್ಯೆಯ ಸುಮಾರು 35%) ಸಹಕಾರಿ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಪ್ರಸ್ತುತ ಭಾರತೀಯ ಸಹಕಾರಿ ಚಳುವಳಿಯೊಳಗೆ ತರಬೇತಿ ಮತ್ತು ಶಿಕ್ಷಣ ಸಾಮಾಗ್ರಿಗಳ ತೀವ್ರವಾದ ಕೊರತೆ ಇದೆ. ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವ ಸಂಘಟಕರು ಹೆಚ್ಚಿನ ತರಬೇತಿ ವಿಧಾನಗಳು ಹಾಗೂ ಕೌಶಲ್ಯಗಳು ಮತ್ತು ತರಬೇತಿ ಸಾಮಾಗ್ರಿಗಳ ನಿರ್ಮಾಣ ಕಾರ್ಯಗಾರಗಳನ್ನು ನಡೆಸಬೇಕು. ತರಬೇತಿ ಸಾಮಾಗ್ರಿಗಳು ಇಂತಹವುಗಳಾಗಿರಬಹುದು : ತರಬೇತಿ ಪ್ರವಾಸ, ತರಬೇತಿ ಕೈಪಿಡಿಗಳು, ದೃಶ್ಯಸಾಧನಗಳು, ದೃಕ್-ಶ್ರವಣ ಸಾಧನಗಳು, ಪೋಸ್ಟರ್‌ಗಳು, ಚಾರ್ಟ್‌ಗಳು ಮತ್ತು ಸಣ್ಣ ಚರ್ಚೆಯ ಪುಸ್ತಕಗಳನ್ನು ಸದಸ್ಯರ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳ ಸಂದರ್ಭದಲ್ಲಿ ಬಳಸಬಹುದು. ನಿಸ್ಸಂದೇಹವಾಗಿ ಚಲನಚಿತ್ರಗಳು ಪ್ರಯೋಜನಕಾರಿ ಮತ್ತು ಪರಿಣಾಮಕಾರಿಯಾಗಿರುತ್ತದೆ, ಫ್ಲ್ಯಾಶ್‌ಕಾರ್ಡ್ಸ್‌ನಂತಹ ಬೋಧನಾ ಸಾಮಾಗ್ರಿಗಳು ಗುಂಪು ಚರ್ಚೆಗಳನ್ನುಂಟುಮಾಡಲು ಹೆಚ್ಚು ಉಪಯುಕ್ತವಾಗಿವೆ. ಕೆಲಸದ ತರಬೇತಿ ಮತ್ತು ಸರಳ ಚರ್ಚೆ-ವಿಷಯಾಧಾರಿತಾ ವಿಶ್ಲೇಷಣೆಗಳು ಮತ್ತು ವಿನಿಮಯ ಭೇಟಿಗಳು ಹೆಚ್ಚು ಸೂಕ್ತ ಮತ್ತು ಅಗತ್ಯವಾಗಿದೆ. ಶಿಕ್ಷಣ ಮತ್ತು ತರಬೇತಿ ವಿಧಾನಗಳು ಸಹ ಮರುಸಂದರ್ಶಿಸುವ ಅಗತ್ಯವಿದೆ. ಉದಾ:ಗುಂಪು ಚರ್ಚೆಗಳು, ವಿಷಯಾಧಾರಿತ ವಿಶ್ಲೇಷಣೆಗಳು, ಸಮಸ್ಯೆಗಳನ್ನು ಪರಿಹರಿಸುವ, ನಿರ್ಧಾರ ಕೈಗೊಳ್ಳುವ ವಿಧಾನಗಳು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಉಪಯುಕ್ತವಾಗಿವೆ.

ಸದಸ್ಯರಿಗಾಗಿ ಶಿಕ್ಷಣ ಕಾರ್ಯಕ್ರಮಗಳನ್ನು ಮತ್ತು ನೌಕರರಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಆರ್ಥಿಕ ಸಂಪನ್ಮೂಲಗಳ ಅಗತ್ಯವಿದೆ. ಸಹಕಾರ ಶಿಕ್ಷಣ ನಿಧಿಗೆ ಕೊಡುಗೆ ನೀಡುತ್ತಿರುವವರ ಅಭಿಪ್ರಾಯವೆಂದರೆ ಪರಿಣಾಮಕಾರಿಯಾಗಿ ನಿಧಿಯ ನಿರ್ವಹಣೆ ಮತ್ತು ಹಂಚಿಕೆಯಾಗಬೇಕು. ಸಹಕಾರಿಗಳು ತಮ್ಮ ಸದಸ್ಯರ ಶಿಕ್ಷಣಕ್ಕಾಗಿ ತಮ್ಮದೇ ಆದ ಸಂಪನ್ಮೂಲಗಳಿಂದ ಸಾಕಷ್ಟು ಹಣವನ್ನು ಸಂಗ್ರಹಿಸುವುದು ಮತ್ತು ಸದಸ್ಯರ ಅರಿವು ಮತ್ತು ನೌಕರರಿಗಾಗಿ ದೀರ್ಘ ತಳಹದಿಯನ್ನು ಹೊಂದಿರುವ ತರಬೇತಿ ಕಾರ್ಯಕ್ರಮಗಳು ಹಮ್ಮಿಕೊಳ್ಳುವುದು. ನಂತರ, ಜನಸಾಮಾನ್ಯರಿಗೆ ಶಿಕ್ಷಣ ಮತ್ತು ಮಾಹಿತಿ ಒದಗಿಸುವುದು ಸಹಕಾರಿಗಳ ಜವಾಬ್ದಾರಿಯಾಗಿದೆ. ■

# ಚಿಟ್‌ಫಂಡ್ – ಚೀಟಿ ವ್ಯವಹಾರದ ಬಗ್ಗೆ ಒಂದಷ್ಟು ಮಾಹಿತಿ

▶▶ **ರಘುನಂದನ ಕೆ.,** ಸಹಪ್ರಧಾನ ವ್ಯವಸ್ಥಾಪಕ, ಕರಾಸೌಸಂಸನಿ, ಬೆಂಗಳೂರು.

ಪಾಶ್ಚಿಮಾತ್ಯ ಮಾದರಿಯ ಬ್ಯಾಂಕಿಂಗ್ ವ್ಯವಸ್ಥೆ ಜಾರಿಗೆ ಬರುವ ಮೊದಲಿನಿಂದಲೂ ಭಾರತದಲ್ಲಿ ಅನೇಕ ಬಗೆಯ ಹಣಕಾಸು ನಿರ್ವಹಣಾ ವಿಧಾನಗಳು ಜಾರಿಯಲ್ಲಿದ್ದವು. ಸಣ್ಣ ಪ್ರಮಾಣದ ಕಿರು ಉಳಿತಾಯ ಯೋಜನೆಗಳ ಮೂಲಕ ಗ್ರಾಮೀಣ ಭಾರತದಲ್ಲಿ ಹಣಕಾಸಿನ ನಿರ್ವಹಣೆ ಜಾರಿಯಲ್ಲಿತ್ತು. ಇಂತಹ ಉಳಿತಾಯ ಯೋಜನೆಯ ರೂಪವಾಗಿ ಆರಂಭವಾದದ್ದು ಚಿಟ್‌ಫಂಡ್ ಅಥವಾ ಚೀಟಿ ವ್ಯವಹಾರ. ಇದು ಒಂದು ಠೇವಣಿ ಯೋಜನೆಯೂ ಹೌದು, ಸಣ್ಣ ಉಳಿತಾಯವೂ ಹೌದು, ಸಾಲ ಪತ್ರವೂ ಹೌದು, ಅದೃಷ್ಟ ಚೀಟಿಯೂ ಹೌದು. ಅಲ್ಲದೆ ಇದು ಸ್ವ ಸಹಾಯ ಗುಂಪು ಮಾದರಿಯ ರಚನೆಯೂ ಹೌದು. ಜಗತ್ತಿನ ಬೇರೆ ಯಾವುದೇ ಹಣಕಾಸು ನಿರ್ವಹಣಾ ಯೋಜನೆಯನ್ನೂ ಹೋಲದ ಇದು ಭಾರತೀಯರ ಆವಿಷ್ಕಾರ ಎನ್ನುವುದು ಅಚ್ಚರಿಯಾದರೂ ನಿಜ.



ಒಂದು ಚಿಟ್ ಫಂಡಿನಲ್ಲಿ ಒಂದು ನಿರ್ದಿಷ್ಟ ಸಂಖ್ಯೆಯ ಗುಂಪು ನಿರ್ದಿಷ್ಟ ಅವಧಿಗಾಗಿ ಒಂದು ನಿರ್ದಿಷ್ಟ ಮೊತ್ತದ ದುಡ್ಡನ್ನು ಕಂತು ಕಂತಾಗಿ ಕಟ್ಟುತ್ತಾ ಹೋಗುತ್ತಾರೆ. ಪ್ರತಿ ತಿಂಗಳೂ ಕಟ್ಟುವ ಕಂತಿನ ಈ ಮೊತ್ತದಿಂದ ಇದರ ಪ್ರಾಯೋಜಕ ನಿರ್ದಿಷ್ಟ ಪ್ರಮಾಣದ ಕಮೀಷನ್ ಕಳೆದು ಉಳಿದ ಮೊತ್ತವನ್ನು ಹರಾಜು ಹಾಕುತ್ತಾನೆ. ದುಡ್ಡಿನ ಅವಶ್ಯಕತೆ ಇರುವ ಆ ಗುಂಪಿನ ಯಾರಾದರೊಬ್ಬ ಸದಸ್ಯ ಆ ಸಂಪೂರ್ಣ ನಿಧಿಯನ್ನು ಅತ್ಯಂತ ಕಡಿಮೆ ಬಿಡ್ ಕೂಗುವ ಮೂಲಕ ಗೆದ್ದುಕೊಳ್ಳಬಹುದು. ಉಳಿದ ಮೊತ್ತ ಸದಸ್ಯರಲ್ಲಿ ಹಂಚಲ್ಪಡುತ್ತದೆ. ನಂಬಿಕೆ ವಿಶ್ವಾಸದ ಆಧಾರದಲ್ಲಿ ನಡೆಯುವ ಯೋಜನೆ ಇದು. ಸಂಗ್ರಹಿಸಿದ ದುಡ್ಡನ್ನೆಲ್ಲಾ ತೆಗೆದುಕೊಂಡು ಓಡಿಹೋಗುವ ಪ್ರರಾಯೋಜಕರು ಅಥವಾ ಒಮ್ಮೆ ಚಿಟ್ ಗೆದ್ದವರು ದುಡ್ಡು ಕಿಸೆಗೇರಿಸಿ ಮುಂದಿನ ಕಂತು ಕಟ್ಟದೆ ಪರಾರಿಯಾದರೆ ಇದು ಚೀಟ್(ಮೋಸ)ಗೆ ದಾರಿಯಾಗುತ್ತದೆ.

**ಕಾನೂನು ಪರಿಧಿಯೇನು**? : ಬಹುತೇಕ ಸಣ್ಣಪುಟ್ಟ ಗುಂಪುಗಳೇ ನಡೆಸುವ ಈ ವ್ಯವಹಾರಕ್ಕೆ ಯಾವ ಕಾನೂನಿನ ಚೌಕಟ್ಟೂ ಇರಲಿಲ್ಲ. ಭದ್ರತೆ ರಕ್ಷಣೆಗಳು ಇರಲಿಲ್ಲ. ಆದರೆ ಚಿಟ್‌ಫಂಡ್ ಎನ್ನುವುದು ಡೆಪಾಸಿಟ್ ಹಾಗೂ ಸಾಲ ಎರಡೂ ಮಿಳಿತವಾಗಿರುವ ಒಂದು ಉತ್ತಮ ಪರಿಕಲ್ಪನೆ. ಈ ಹಿನ್ನಲೆಯಲ್ಲಿ ಚಿಟ್‌ಫಂಡುಗಳ ನಿಯಂತ್ರಣ ಮತ್ತು ಕ್ಷೇಮಾಭಿವೃದ್ಧಿಗಾಗಿ ಕೇಂದ್ರ ಸರ್ಕಾರ 1982ರಲ್ಲಿ ಚಿಟ್‌ಫಂಡ್ ಆಕ್ಟ್ ಜಾರಿ ಮಾಡಿತು ಹಾಗೂ 1983ರಲ್ಲಿ ಕರ್ನಾಟಕ ಸರ್ಕಾರ ಚಿಟ್‌ಫಂಡ್ ರೂಲ್ಸ್‌ನ್ನು ಮಾಡುವ ಮೂಲಕ ಈ ವ್ಯವಹಾರಕ್ಕೆ ಕಾನೂನಿನ ಚೌಕಟ್ಟನ್ನು ರೂಪಿಸಲಾಯಿತು. ಈ ಕಾಯ್ದೆಯಡಿ ನೋಂದಣಿಯಾಗುವ ಮೂಲಕ ಚಿಟ್‌ಫಂಡ್ ವ್ಯವಹಾರವನ್ನು ಮಾಡಬೇಕಾದಾಗ್ಯೂ ಕೂಡ ನೋಂದಣಿಯಾಗದೇ ಕತ್ತಲ ವ್ಯವಹಾರ ನಡೆಸುವ ಚೀಟ್‌ಫಂಡ್‌ಗಳ ಸಂಖ್ಯೆಯೇ ಅಧಿಕ.

ನೋಂದಣಿಯಾದ ಚಿಟ್‌ಫಂಡ್‌ಗಳಲ್ಲಿನ ಸುರಕ್ಷತಾ ಮಾನದಂಡಗಳೇನು? – ನೋಂದಣಿಯಾದ ಚಿಟ್‌ಫಂಡ್‌ನಲ್ಲಿ ವ್ಯವಹರಿಸಿದಾಗ ಭದ್ರತೆಯ ಪಾಲು ಅಧಿಕ. ಮೋಸವಾದಲ್ಲಿ ಕಾನೂನು ಕ್ರಮಗಳನ್ನು ಕೂಡ ಜರುಗಿಸಬಹುದು. ನೋಂದಣಿಯಾದ ಚಿಟ್‌ಫಂಡ್ ಸಂಸ್ಥೆಗಳು ಪ್ರತೀ ಚೀಟಿಗೆ ಎಷ್ಟು ಮೊತ್ತದ ಚೀಟಿ ನಡೆಸುತ್ತವೋ ಅಷ್ಟು ಮೊತ್ತದ ಡಿಪಾಸಿಟ್ ಇಡಬೇಕಾಗುತ್ತದೆ. ಇಲ್ಲದಿದ್ದರೆ ಅನುಮತಿ ಸಿಗದು. ಸಂಸ್ಥೆಯ ನಿರ್ವಹಣೆಗೆ ನಿಗದಿತ ಕಮೀಷನ್ ಮಾತ್ರ ಪಡೆಯಬಹುದು, ಅದಕ್ಕಿಂತ ಹೆಚ್ಚು ಪಡೆಯುವಂತಿಲ್ಲ. ಚೀಟಿ ಹಾಕುವ ಪ್ರತೀ ಸದಸ್ಯರ ವಿವರಗಳನ್ನು ಪಡೆಯುವುದು ಕಡ್ಡಾಯ. ಸಂಸ್ಥೆಯ ಪ್ರತೀ ತಿಂಗಳ ವಹಿವಾಟನ್ನೂ ಸಕಾರದ ಗಮನಕ್ಕೆ ತರಬೇಕು, ಒಂದುವೇಳೆ ನಿಧಾನವಾದರೆ ಕಾರಣವನ್ನು ನಮೂದಿಸಬೇಕು.

ಚೀಟಿ ವ್ಯವಹಾರದಲ್ಲಿ ಮೋಸವಾದರೆ ಸಹಕಾರ ಸಂಘಗಳ ನಿಬಂಧಕರಿಗೆ ದೂರು ನೀಡಬೇಕಾಗುತ್ತದೆ. ಅವರು ವ್ಯಾಜ್ಯ ಆಲಿಸಿ ಆದೇಶ ಮಾಡುತ್ತಾರೆ. ಈ ಆದೇಶವನ್ನು ಸಿವಿಲ್ ಕೋರ್ಟಿನಲ್ಲಿ ಡಿಕ್ರಿ ಮೂಲಕ ಜಾರಿಗೊಳಿಸಬೇಕಾಗುತ್ತದೆ. ಆದರೆ ನೇರವಾಗಿ ಸಿವಿಲ್ ಕೋರ್ಟ್ ಮೆಟ್ಟಿಲೇರಲು ಕಾಯ್ದೆ ಅವಕಾಶ ಒದಗಿಸಿಲ್ಲ. ಆದರೆ ಐಪಿಸಿ ಸೆಕ್ಷನ್ ಪ್ರಕಾರ ಚೀಟ್‌ಫಂಡ್ ತಪ್ಪಿತಸ್ಥರ ವಿರುದ್ಧ ವಂಚನೆ ಆರೋಪದಡಿ ಪ್ರಕರಣ ದಾಖಲಿಸಬಹುದು. ಕ್ರಿಮಿನಲ್ ಮೊಕದ್ದಮೆ ಹೂಡುವ ಅವಕಾಶವಿದೆ. ಇದರ ಹೊರತು ಚೀಟ್‌ಫಂಡ್‌ಗಳ ವಿರುದ್ಧ ಆರ್‌ಬಿಐ ನಿಯಮಗಳ ಅನ್ವಯ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಬಹುದು. ಆದಾಯ ತೆರಿಗೆ ಇಲಾಖೆಯಿಂದ ಕ್ರಮ ತೆಗೆದುಕೊಳ್ಳಬಹುದು.

**ಚಿಟ್‌ಫಂಡ್‌ನಲ್ಲಿ ಅವ್ಯವಹಾರ** : ಜನರಿಗೆ ಮೋಸ ಮಾಡುವ ಉದ್ದೇಶದಿಂದಲೇ ಚೀಟಿ ಆರಂಬಿಸಿದ್ದಲ್ಲಿ ಸಂಸ್ಥೆ ಯಾ ಪ್ರಾಯೋಜಕ ಸಂಗ್ರಹಿಸಿದ ಚೀಟಿ ದುಡ್ಡನ್ನು ತೆಗೆದುಕೊಂಡು ಮಾಯವದಾಲ್ಲಿ ಅಥವಾ ಚೀಟಿ ಹಾಕುವವರ ಪೈಕಿ ಯಾರಾದರೊಬ್ಬರು ಚೀಟಿ ಮಾಲಿಕರಿಗೆ ಸರಿಯಾಗಿ ಹಣ ಸಂದಾಯ ಮಾಡದಿದ್ದಾಗ ಅವ್ಯವಹಾರದ

ಸಾಧ್ಯತೆಯಿರುತ್ತದೆ. ಸ್ನೇಹಿತರು ಸಂಬಂಧಿಕರು ಸೇರಿ ನಡೆಸುವ ಚೀಟಿ ಕಾನೂನು ಬಾಹೀರ, ಇಲ್ಲಿ ಮೋಸವಾದರೆ ಹಣ ಸಿಗುವ ಸಾಧ್ಯತೆ ಕಡಿಮೆ. ಹಾಗೆಂದು ನೋಂದಣಿಯಾದ ಸಂಸ್ಥೆಗಳು ಅವ್ಯವಹಾರ ಮಾಡಿಲ್ಲವೆಂದಲ್ಲ, 1980ರಲ್ಲಿ ಪಶ್ಚಿಮ ಬಂಗಾಳದಲ್ಲಿ ನಡೆದಿದ್ದ 120 ಕೋಟಿಗಳವರೆಗಿನ ಸಂಚಯಿತ ಚಿಟ್‌ಫಂಡ್ ವಂಚನೆಯಿಂದ ಹಿಡಿದು ಇತ್ತೀಚೆಗೆ ನಡೆದ ಶಾರದಾ ಗ್ರೂಫ್ ಆಫ್ ಕಂಪನೀಸ್ ವಂಚನೆಯವರೆಗೆ ಅನೇಕ ಉದಾಹರಣೆಗಳು ಸಿಗುತ್ತವೆ. ಆದರೆ ತೊಡಗಿಸಿದ ಹಣ ಸಿಗುತ್ತದೆನ್ನುವುದು ಸಂತಸದ ವಿಷಯ.

**ಸೌಹಾರ್ದ ಸಹಕಾರಿಗಳಲ್ಲಿ ಚಿಟ್‌ಫಂಡ್ :** 1997ರ ಸೌಹಾರ್ದ ಸಹಕಾರಿ ಅಧಿನಿಯಮದಡಿ ನೋಂದಾಯಿಸಲ್ಪಟ್ಟ ಸೌಹಾರ್ದ ಸಹಕಾರಿಗಳು ಕೂಡ ಚೀಟಿ ವ್ಯವಹಾರವನ್ನು ಮಾಡಬಹುದು. ಚೀಟಿ ವ್ಯವಹಾರ ನಡೆಸುವ ಸೌಹಾರ್ದ ಸಹಕಾರಿಗಳು ತಮ್ಮ ತಮ್ಮ ಉಪವಿಧಿಯಲ್ಲಿ ಈ ವ್ಯವಹಾರ ನಡೆಸುವ ಬಗ್ಗೆ ಪ್ರಾವಧಾನ ಹೊಂದಿರಬೇಕು. ಚಿಟ್‌ಫಂಡ್ ಆಕ್ಟ್‌ನಡಿ ನೋಂದಾವಣೆ ಕಡ್ಡಾಯ. ಪ್ರತೀ ಚೀಟಿಗೆ ಪ್ರತ್ಯೇಕವಾಗಿ ಅನುಮತಿಯನ್ನು ಹಾಗೂ ಪೂರ್ಣ ಚೀಟಿ ಮೊತ್ತದಷ್ಟನ್ನು ಠೇವಣಿಯನ್ನು ಇಡಬೇಕಾಗುತ್ತದೆ. ಉಳಿದಂತೆ ಚೀಟ್‌ಫಂಡ್ ಆಕ್ಟ್‌ನ ನಿಬಂಧನೆಗನುಗುಣವಾಗಿ ವ್ಯವಹಾರ ನಡೆಸಬಹುದು. ರಾಜ್ಯದಲ್ಲಿ ಅನೇಕ ಸೌಹಾರ್ದ ಸಹಕಾರಿಗಳು ಈಗಾಗಲೇ ಈ ವ್ಯವಹಾರದಲ್ಲಿ ತೊಡಗಿಕೊಂಡಿವೆ.

ಸದಸ್ಯರಿಗೆ ಹೆಚ್ಚಿನ ಅನುಕೂಲ ಒದಗಿಸಲು ಹಾಗೂ ಸಂಸ್ಥೆಗೆ ಅತಿ ಹೆಚ್ಚಿನ ಲಾಭ ಗಳಿಕೆಗೆ ಅವಕಾಶ ಮಾಡಿಕೊಡುವ ಈ ವ್ಯವಹಾರ ಬಡ್ಡಿಯೇತರ ಆದಾಯದ ಉತ್ತಮ ಮೂಲವೂ ಹೌದು. ಆದರೆ ಸೌಹಾರ್ದ ಸಹಕಾರಿಯ ಹೆಸರನ್ನೂ ಹೊಂದಿರುವ ಸಮೂಹ ಸಂಸ್ಥೆಗಳು ಚಿಟ್‌ಫಂಡ್ ವಂಚನೆಗೆ ಕಾರಣವಾಗಿ ಸೌಹಾರ್ದ ಸಹಕಾರಿಗಳ ಹೆಸರಿಗೆ ಮಸಿ ಬಡಿಯುತ್ತಿರುವುದರಿಂದ ಈ ವ್ಯವಹಾರದಲ್ಲಿ ತೊಡಗುವ ಸದಸ್ಯರು ಎಚ್ಚರಿಕೆ ವಹಿಸಬೇಕಿದೆ. ಗ್ರಾಮೀಣ ಭಾರತದಲ್ಲಿ ವಿಶ್ವಾಸ ಹಾಗೂ ನಂಬಿಕೆಗಳ ಆಧಾರದಿಂದಲೇ ನಡೆಯುತ್ತಿದ್ದ ಚೀಟಿ ವ್ಯವಹಾರ ಇಂದು ವಂಚನೆಯ ಕಾರಣವೂ ಆಗಿ ಬದಲಾದ ಮನುಷ್ಯನ ಅಣಕಿಸುತ್ತಿದೆ. ಮಧ್ಯಮವರ್ಗದ ಆಪತ್ಬಾಂದವನಂತೆ ಕಾರ್ಯನಿರ್ವಹಿಸುವ, ಜಗತ್ತಿನಲ್ಲೇ ಅಪರೂಪದ ಆರ್ಥಿಕ ಪದ್ಧತಿಯಾಗಿರುವ ಭಾರತದ ಈ ವ್ಯವಹಾರವನ್ನು ಮೋಸ ವಂಚನೆಗಳಿಂದ ಉಳಿಸಿ ಬೆಳೆಸಬೇಕಿದೆ. ಚೀಟಿ ಹಾಕುವವರಿಗೂ ನಡೆಸುವವರಿಗೂ ಏಕಕಾಲಕ್ಕೆ ಲಾಭ ಉಂಟುಮಾಡುವ ಚಿಟ್‌ಫಂಡ್ ವ್ಯವಹಾರ ಸಹಕಾರ ಸಂಸ್ಥೆಗಳ ಮೂಲಕ ಹೊಸ ದಿಕ್ಕನ್ನು ಕಂಡುಕೊಳ್ಳುವ ಅವಶ್ಯಕತೆ ಇದೆ. ವಿಶ್ವಾಸ ನಂಬಿಕೆಗಳ ಬಂಧವನ್ನು ಆರ್ಥಿಕತೆಯಲ್ಲಿ ಬೆಸೆದ ಗ್ರಾಮೀಣ ಭಾರತದ ಈ ಪದ್ಧತಿಯನ್ನ ಮೋಸ ವಂಚನೆಗಳಿಗೆ ಕಾರಣವಾಗದಂತೆ ಉಳಿಸಿಕೊಳ್ಳುವುದು ಸಮಾಜದ ಜವಾಬ್ದಾರಿಯಾಗಿದೆ. ■

## ರಿಸರ್ವ್ ಬ್ಯಾಂಕ್ ನೂತ ಗವರ್ನರ್ ಆಗಿ ಶ್ರೀ ರಘುರಾಮ ರಾಜನ್



ಭಾರತದ ರಿಸರ್ವ್ ಬ್ಯಾಂಕ್ ನೂತನ ಗವರ್ನರ್ ಆಗಿ ಖ್ಯಾತ ಆರ್ಥಿಕ ತಜ್ಞ ರಘುರಾಮ ರಾಜನ್ ಅವರು ನೇಮಕವಾಗಿದ್ದಾರೆ. ಹಾಲಿ ಗವರ್ನರ್ ಡಿ. ಸುಬ್ಬರಾವ್ ಅವರ ಸೇವಾವಧಿ ಸೆಪ್ಟೆಂಬರ್ 5ಕ್ಕೆ ಮುಗಿಯಲಿದ್ದು, ನಂತರದಲ್ಲಿ ರಿಸರ್ವ್ ಬ್ಯಾಂಕ್ ಅನ್ನು 3 ವರ್ಷ ಮುನ್ನಡೆಸುವ ಹೊಣೆ ರಾಜನ್ ಹೆಗಲೇರಲಿದೆ.

## ರಾಜ್ಯ ಸಹಕಾರಿ ಬ್ಯಾಂಕುಗಳ ರಾಷ್ಟ್ರೀಯ ಮಹಾ ಮಂಡಳದ ಉಪಾಧ್ಯಕ್ಷರಾಗಿ ಶ್ರೀ ಆರ್.ಎಂ. ಮಂಜುನಾಥಗೌಡರ ಅವಿರೋಧ ಆಯ್ಕೆ



ರಾಜ್ಯ ಸಹಕಾರಿ ಬ್ಯಾಂಕುಗಳ ರಾಷ್ಟ್ರೀಯ ಮಹಾಮಂಡಳಿ (National Federation of State Co-operative Banks Ltd., Mumbai) ಉಪಾಧ್ಯಕ್ಷರಾಗಿ ರಾಜ್ಯ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಶ್ರೀ ಆರ್. ಎಂ. ಮಂಜುನಾಥಗೌಡ ಅವಿರೋಧ ಆಯ್ಕೆಯಾಗಿರುವ ಇವರನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ವ್ಯವಸ್ಥಾಪಕರು ಅಭಿನಂದಿಸಿದ್ದಾರೆ.

## ಉಪ ವಿಧಿಗಳ ತಿದ್ದುಪಡಿಗೆ ಸೂಚನೆ

ರಾಜ್ಯದ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿಯ ಅಧಿನಿಯಮದಲ್ಲಿ ಬದಲಾದ ಬದಲಾವಣೆಗೆ ಅನುಗುಣವಾಗಿ ತಮ್ಮ ಸಂಸ್ಥೆಯ ಉಪ ವಿಧಿಗಳನ್ನು ತಿದ್ದುಪಡಿ ಮಾಡಿಕೊಳ್ಳಬೇಕಾಗುವುದು. ತಿದ್ದುಪಡಿ ಮಾಡಿಕೊಳ್ಳಬೇಕಾದ ನಿಯಮಗಳನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ ವಿವರವಾಗಿ ನೀಡಲಾಗಿದೆ.

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13.
RNI No. KARBIL - 2004/18001. Pages 20

ಬೆಂಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರುಗಳ ಸಂಪರ್ಕ ಸಭೆ

# ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ನೇತೃತ್ವದಲ್ಲಿ ಬೆಂಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು / ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಸಂಪರ್ಕ ಸಭೆ"ಯನ್ನು ದಿನಾಂಕ 18.07.2013ರ ಗುರುವಾರ ಬೆಳಗ್ಗೆ 11.00 ಗಂಟೆಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರ ಇವರ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರಿನಲ್ಲಿ ಕರೆಯಲಾಗಿತ್ತು. ಈ ಸಭೆಯಲ್ಲಿ ಸಹಕಾರ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳು, ಬೆಂಗಳೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆ, ಬಡ್ಡಿಯೇತರ ಆದಾಯ ಹಾಗೂ ಸದಸ್ಯರಿಗೆ ಹೆಚ್ಚಿನ ಸೇವೆ ಒದಗಿಸುವುದು, ಸದಸ್ಯ ಸಹಕಾರಿಗಳಿಗೆ ಅವಶ್ಯಕವಾದ ತಾಂತ್ರಿಕತೆಯನ್ನು ಒದಗಿಸುವುದು ಮುಂತಾದ ವಿಷಯಗಳ ಕುರಿತು ಚರ್ಚಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಕರಾಸೌಸಂಸನಿ.,ದ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ಸಹಕಾರ ಕ್ಷೇತ್ರದ ಪ್ರಚಲಿತ ವಿದ್ಯ ಮಾನಗಳ ಬಗ್ಗೆ ತಿಳಿಸುತ್ತಾ ಸೌಹಾರ್ದ ಸಹಕಾರಿ ಕ್ಷೇತ್ರವು ಅಭೂತಪೂರ್ವ ಸಾಧನೆ ಮಾಡಿದ್ದು, ಇಡೀ ಒಂದು ಸಮಾಜದ ಬೆಳವಣಿಗೆಗೆ ಒಂದು ಮಾದರಿಯಾಗಿದೆ. ಹೊಂದಾಣಿಕೆ ಮಾಡಿಕೊಂಡು ಮುನ್ನುಗ್ಗಿದಾಗ ಬೆಳವಣಿಗೆ ಸಾಧ್ಯ, ಸವಾಲನ್ನು ಅವಕಾಶವಾಗಿ ತೆಗೆದುಕೊಳ್ಳಬೇಕು ಎಂದು ತಿಳಿಸಿದರು. ನಂತರ ಬೆಂಗಳೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆಗೆ (ಸೌಹಾರ್ದ ಸಹಕಾರಿ ಕಾಯ್ದೆ ಕಲಂ.4(2) (ಸಿ) ಯ ಅವಕಾಶದಂತೆ) ಸಂಬಂಧಿಸಿದಂತೆ ಕರಾಸೌಸಂಸನಿ.,ದ ಸಹಾಯಕ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್‌ರವರು ಒಕ್ಕೂಟ ಸಹಕಾರಿಯ ಅರ್ಥ, ರಚನೆ, ನೋಂದಣಿ ಕಾರ್ಯವಿಧಾನ, ನೋಂದಣಿ ಅರ್ಜಿ ಜೊತೆ ಸಲ್ಲಿಸಬೇಕಾದ ದಾಖಲಾತಿಗಳು, ಒಕ್ಕೂಟ ರಚನೆಯಿಂದಾಗುವ ಲಾಭಗಳ ಬಗ್ಗೆ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಸೌಹಾರ್ದ ಸಹಕಾರಿಗಳು ಒಕ್ಕೂಟ ರಚನೆಯ ಬಗ್ಗೆ ವಿವರವಾದ ಚರ್ಚೆ ನಡೆಸಿ ಸಂಭವನೀಯ ಪ್ರವರ್ತಕರ ಪಟ್ಟಿಯನ್ನು ತಯಾರಿಸಲಾಯಿತು.

ನಂತರದಲ್ಲಿ ಬಡ್ಡಿಯೇತರ ಆದಾಯ ಹಾಗೂ ಸದಸ್ಯರಿಗೆ ಹೆಚ್ಚಿನ ಸೇವೆ ಒದಗಿಸುವ ಬಗ್ಗೆ ಶ್ರೀ ಡಾ॥ ನಂದೀಶ್ ಹಿರೇಮಠ್‌ರವರು ಮಾಹಿತಿ ಒದಗಿಸಿದರು. ಇದೇ ಸಂದರ್ಭದಲ್ಲಿ ಕೆ ಎಂ ಇನ್ಫೋಸಿಸ್‌ನ ಸಿ.ಇ.ಓ ಆದ ಹರೀಶ್‌ರವರು ಉಪಸ್ಥಿತರಿದ್ದು, ತಮ್ಮ ಸಂಸ್ಥೆಯ ಸೌಲಭ್ಯಗಳು ಹಾಗೂ ಸೇವೆಗಳ ಬಗ್ಗೆ ತಿಳಿಸಿದರು. ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುವುದರ ಬಗ್ಗೆ ಸಂಯುಕ್ತ ಸಹಕಾರಿಯು ಮಾಹಿತಿ ಹಾಗೂ ಸೇವೆಯನ್ನು ಒದಗಿಸಬೇಕೆಂದು ಸಭೆಯು ಅಭಿಪ್ರಾಯಪಟ್ಟಿತು.

ದಿ : 5-8-2013ರಂದು ನಡೆದ ಸಭೆಯಲ್ಲಿ ಮುಖ್ಯ ಪ್ರವರ್ತಕರಾಗಿ ಉದಯ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಗುಂಡುರಾವ್ ಆಯ್ಕೆ ಯಾಗಿದ್ದಾರೆ. ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕವನ್ನು ಶ್ರೀ ವೈ. ಕುಮಾರ್, ಉಪಪ್ರಧಾನ ವ್ಯವಸ್ಥಾಪಕರು, ಕರಾಸೌಸಂಸನಿ., ಬೆಂಗಳೂರು ಇವರು ನಡೆಸಿಕೊಟ್ಟರು. ಸಭೆಯ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಬೆಂಗಳೂರು ವಿಭಾಗಾಧಿಕಾರಿ ಶ್ರೀ ರಘುನಂದನ್ ನಡೆಸಿಕೊಟ್ಟರು. ಸಭೆಗೆ 25 ಸೌಹಾರ್ದ ಸಹಕಾರಿಗಳಿಂದ 39 ಪ್ರತಿನಿಧಿಗಳು ಭಾಗವಹಿಸಿದ್ದರು.

LEADER OF LEADERS - KARNATAKA STATE SOUHARDA FEDERAL CO-OP-LTD BANGALORE

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತೀಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ಸಹ ಪ್ರಧಾನ ವ್ಯವಸ್ಥಾಪಕ | ಶ್ರೀಮತಿ ಕೃತಿ ಜನಾರ್ಧನ್ | 9900244207 |
| ಸಹ ಪ್ರಧಾನ ವ್ಯವಸ್ಥಾಪಕ | ಶ್ರೀ ಶ್ರೀಕಾಂತ | 9916814888 |
| ತರಬೇತಿ ಅಧಿಕಾರಿ | ಶ್ರೀ ವಿ.ಜಿ. ಕಾರಕೂನ | 9482734077 |
| ಬೆಂಗಳೂರು ವಿಭಾಗಾಧಿಕಾರಿ | ಶ್ರೀ ರಘುನಂದನ್ ಕೆ. | 9481036592 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |
| ಗುಲ್ಬರ್ಗಾ ವಿಭಾಗಾಧಿಕಾರಿ | ಶ್ರೀ ಸಂಜಯ ಕೋರಟಕರ | 9900990268 |
| ಮೈಸೂರು ವಿಭಾಗಾಧಿಕಾರಿ | ಶ್ರೀ ಶಿವಕುಮಾರ ಬಿರಾದಾರ | 9844454995 |

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು - 10.
web : www.souharda.coop,
E-mail : souharda@souharda.coop,
**ದೂ.ಸಂ :** 23378375/76/77/78/79/80 & 23474408, 23573291
ಸಂಪಾದಕ, ಪ್ರಕಾಶಕ : **ಶರಣಗೌಡ ಜಿ. ಪಾಟೀಲ**
ಸಂಚಿಕೆ ಸಿದ್ಧತೆ : **ವಿ.ಜಿ.ಕಾರಕೂನ**
ಮುದ್ರಣ : **ವರ್ಣ ಕಮ್ಯುನಿಕೇಷನ್ಸ್**, ಬೆಂಗಳೂರು.

**ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ :** ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ - 1, ದೂ. 0831-2401551
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ಗುಲ್ಬರ್ಗಾ ನಂ 1-4/3 ಎ ಸಂಜೀವರಾವ್ ಬಡಾವಣೆ,
ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ - 585102. ದೂ. 08472-270222, ಮೊ. 9900990268.

Edited, Printed and Published by Sharan Gouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010